2. ಹಕ್ಕುಚ್ಯುತಿ ಪ್ರಸ್ತಾವ

ವಿಷಯ : ಶೃಂಗೇರಿ ಶಾಸಕರಾದ ಶ್ರೀ ಡಿ.ಎಸ್. ಜೀವರಾಜ್ ಅವರನ್ನು ಡಿವೈಎಸ್‌ಪಿಯವರು ಬಂಧನ ಮಾಡಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈಗಾಗಲೇ ತಮ್ಮಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರುವುದರಿಂದ, ಸನ್ಮಾನ್ಯ ಮುಖ್ಯಮಂತ್ರಿಗಳೇ, ಈ ದತ್ತ ಜಯಂತಿಯ ಸಂದರ್ಭದಲ್ಲಿ, ನಮ್ಮ ಎಲ್ಲಾ ಶಾಸಕರಿಗೆ ಸಂಬಂಧಪಟ್ಟಿದ್ದು, ಅದರಲ್ಲಿ ಬೇರೆ ಪ್ರಶ್ನೆ ಏನೂ ಇಲ್ಲ. ದತ್ತಜಯಂತಿಯನ್ನು ಮಾಡಿದ್ದು ಸರಿಯೋ ತಪ್ಪೋ ಅದು ಬೇರೆ ವಿಷಯ. ನಾವು ಎಲ್ಲರೂ ಸಹಿ ಮಾಡಿರುವ ಒಂದು ಹಕ್ಕುಚುತಿಯನ್ನು ಮಂಡಿಸುತ್ತಿದ್ದೇವೆ. ದಿನಾಂಕ 17–12–2004ರಂದು ಕೊಪ್ಪದಲ್ಲಿ ದತ್ತ ಜಯಂತಿ ವಿಚಾರದಲ್ಲಿ ಮೈಕ್ ಹಿಡಿದುಕೊಂಡು ಭಾಷಣವನ್ನು ಶೃಂಗೇರಿ ಶಾಸಕ ಶ್ರೀ ಜೀವರಾಜ್‌ರವರು ಪ್ರಾರಂಭ ಮಾಡುತ್ತಿದ್ದ ಹಾಗೆ ಆ ಮೈಕ್‌ಗೆ ಲೈಸೆನ್ಸ್ ಇಲ್ಲ ಎಂದು ಹೇಳಿ ಡಿವೈಎಸ್‌ಪಿ ಶಿವಕುಮಾರ್ ಎನ್ನುವ ಅವರು ಸೆಕ್ಷನ್ 143, 144, 147, 148, 332 ಮತ್ತು 353ರ ಅನ್ವಯ ಶಾಸಕ ಶ್ರೀ ಜೀವರಾಜ್‌ರವರನ್ನು ಬಂಧನ ಮಾಡಿ, ಆಶ್ಚರ್ಯ ಅಂದರೆ ಅವರನ್ನು ಕೊಪ್ಪದ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಸಾಮಾನ್ಯ ಖೈದಿಗಳ ಜೊತೆ ನಡೆದುಕೊಂಡ ರೀತಿ, ಅದಕ್ಕಿಂತ ಕೀಳಾಗಿ ನಡೆದುಕೊಂಡು ಅವರನ್ನು ಪೊಲೀಸ್ ಸ್ಟೇಷನ್‌ನ ಲಾಕಪ್‌ನಲ್ಲಿ ಇಟ್ಟಿದ್ದಾರೆ. ಆ ಸಂದರ್ಭದಲ್ಲಿ ಆ ಮಾರ್ಗವಾಗಿ ನಾನು ಹೋಗುತ್ತಿರಬೇಕಾದರೆ ಚಿತ್ರದುರ್ಗದ ಹತ್ತಿರ ಹೋದಾಗ ಮಾನ್ಯ ಮುಖ್ಯಮಂತ್ರಿಗಳ ಸಂಪರ್ಕ ಮಾಡಿದೆ. ಆಗ ಸಾಯಂಕಾಲದ ಸಮಯ; ಸುಮಾರು ಏಳೂವರೆ ಗಂಟೆ, ಸ್ವಾಮಿ, ಈ ತರಹ ಆಗಿದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಶಾಸಕ ತನ್ನ ಕ್ಷೇತ್ರದಲ್ಲಿ ಸರಿ ಕಂಡದ್ದನ್ನು ಮಾಡುತ್ತಿರುತ್ತಾನೆ. ನೀವು ಬಂಧನ ಮಾಡುವುದರ ಬಗ್ಗೆ ನಮ್ಮದೇನೂ ವಿರೋಧ ಇಲ್ಲ. ಆದರೆ ಒಬ್ಬ ಚುನಾಯಿತ ಶಾಸಕನನ್ನು ಎಳೆದುಕೊಂಡು ಹೋಗಿ, ಇನ್ನೂ ಅನೇಕ ಜನರನ್ನು ಬಂಧನ ಮಾಡಿ, ಲಾಕಪ್‌ನಲ್ಲಿಟ್ಟಾಗ ಮುಖ್ಯಮಂತ್ರಿಗಳು ಸೂಚನೆ ಕೊಟ್ಟ ಮೇಲೆ ಸಂಪರ್ಕ ಮಾಡಿ ಲಾಕಪ್‌ನಿಂದ ಹೊರ ತರುವಂತಹ ಪ್ರಯತ್ನ ಮಾಡಿದೆವು. ಇದು ಒಂದು ಭಾಗ. ಆದಾದ ಮೇಲೆ ಇವರು ನಾನೇನೂ ತಪ್ಪು ಮಾಡಿಲ್ಲ ನಾನು ಯಾವುದೇ ಜಾಮೀನು ಕೊಡುವುದಿಲ್ಲವೆಂದರೂ ಶಿವಮೊಗ್ಗ ಜೈಲಿಗೆ ಅವರನ್ನು ಕರೆದುಕೊಂಡು ಹೋದರು. ಅದರ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ. ಇವರು ಶಾಸಕರು, ನನ್ನನ್ನು ಈ ರೀತಿ ಅಮಾನುಷವಾಗಿ ಈ ಒಬ್ಬ ಡಿವೈಎಸ್‌ಪಿಯುವರು ನಡೆದುಕೊಂಡರು ಎಂದು ಹೇಳಿ ಅವರು ಒಂದು ಪತ್ರಿಕಾ ಹೇಳಿಕೆಯನ್ನು ಅಲ್ಲಿ ಎಲ್ಲೋ ಒಂದು ಕಡೆ ಕೊಟ್ಟರು. ಪತ್ರಿಕಾ ಹೇಳಿಕೆಯಲ್ಲಿ ಏನು ಇದೆ ಎನ್ನುವುದರ

ಬಗ್ಗೆ ಬಹಳ ಸ್ಪಷ್ಟವಾಗಿ, ಈ ಡಿವೈಎಸ್‌ಪಿ ಈ ಶಾಸಕರಿಗೆ ಒಂದು ನೋಟಿಸ್ ಕಳುಹಿಸಿದ್ದಾರೆ. ನನಗೆ ಮರ್ಯಾದೆ ಹೋಗಿದೆ, ನನ್ನ ಮನಸ್ಸಿಗೆ ನೋವಾಗಿದೆ ನೀನು 25 ಲಕ್ಷ ರೂಪಾಯಿಗಳ ದಂಡ ಕೊಡಬೇಕು, ಇಲ್ಲದಿದ್ದರೆ ನಾನು ಕೋರ್ಟ್‌ಗೆ ಹೋಗುತ್ತೇನೆಂದು ಹೇಳಿ ಲಾಯರ್ ನೋಟಿಸ್ ಕೊಟ್ಟಿದ್ದಾನೆ ನಾನು ಆ ವಿವರಕ್ಕೆ ಹೋಗುವುದಿಲ್ಲ. ಅವರು ಹೇಳಿರುವುದೇನು ಸ್ವಾಮಿ? ನಾನು ಇನ್ನೂ ಮೈಕ್ ಹಿಡಿದು ಭಾಷಣ ಆರಂಭಿಸಬೇಕು ಎನ್ನುವಷ್ಟರಲ್ಲಿ ವೇದಿಕೆ ಬಳಿಗೆ ಗೂಳಿಯಂತೆ ನುಗ್ಗಿದ ಶಿವಕುಮಾರ್ ತಮ್ಮನ್ನು ಏಕಾಏಕಿ ತಳ್ಳಿ, ಕಾರ್ಯಕರ್ತರನ್ನು ಮನಸ್ಸೋಇಚ್ಛೆ ಲಾಠಿಯಿಂದ ಥಳಿಸಿದ್ದಾರೆ. ನೀವು ಶಾಸಕನಾದರೆ ಏನು? ನಿನ್ನನ್ನು ನೋಡಿಕೊಳ್ಳುತ್ತೇನೆಂದು ಹೇಳಿ ಲಾಕಪ್‌ಗೆ ತಳ್ಳಿದರು. ಶಿವಕುಮಾರರನ್ನು ಅಮಾನತ್ತುಪಡಿಸಿ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯದ ಹೊರತು, ಡಿವೈಎಸ್‌ಪಿ ಒತ್ತಡಕ್ಕೆ ಕಾರಣ, ಏನು ತಾಲ್ಲೂಕಿನ ..... ಇದಕ್ಕೆ ಕಾರಣ ಅಂದರೆ 11 ಕ್ಲಬ್‌ಗಳಲ್ಲಿ ಏನು ನಡೆಯುತ್ತಿತ್ತು ಅದನ್ನು ನಾನು ವಿರೋಧ ಮಾಡಿದೆ. ಈ ಎಲ್ಲಾ ಕಾರಣಗಳಿಗೋಸ್ಕರ ನನಗೆ ಈ ರೀತಿ ಅನ್ಯಾಯ ಮಾಡಿದ್ದಾರೆ" ಎಂದು ಇವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಒಂದೇ ಶಬ್ಧ 'ಗೂಳಿಯಂತೆ ನುಗ್ಗಿ ನನ್ನನ್ನು ಎಳೆದುಕೊಂಡು ಹೋದರು' ಎಂದು ಹೇಳಿದರೆ ಅವರಿಗೆ ಮನಸ್ಸು ನೋವಾಯಿತಂತೆ, "Your press statement has caused mental agony and physical pain and personal hardship and inconvenience to my client. For the mental agony, physical pain and loss of reputation, the damage is estimated at Rs.25 lakhs". 25 ಲಕ್ಷ ರೂ. ದಂಡ ಕೊಡು, ಇಲ್ಲದಿದ್ದರೆ ನಿನ್ನ ಮೇಲೆ ಕೇಸ್ ಹಾಕುತ್ತೇನೆ. ಈ ಮಾತನ್ನು ಆ ಮನುಷ್ಯ ಹೇಳಿದ್ದಾನೆ. ನಾನು ಕೇಳುತ್ತೇನೆ ಇಲ್ಲಿರುವಂತಹ ನಮ್ಮ ಶಾಸಕ ಮಿತ್ರರು ಯಾರೇ ಇರಲಿ ಯಾವುದೇ ಪಕ್ಷ ಇರಲಿ ಒಬ್ಬ ಚುನಾಯಿತ ಪ್ರತಿನಿಧಿ ತನ್ನ ಕರ್ತವ್ಯವನ್ನು ಮಾಡಬೇಕಾದರೆ ಅವಮಾನವಾಗಿರುವುದು ಇವರಿಗೆ ಲಾಕಪ್‌ಗೆ ಹಾಕಿರುವುದು ಇವರಿಗೆ, ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ ಮಾತನಾಡಿದ್ದಾರೆ. ಇಷ್ಟೆಲ್ಲಾ ಆದ ಮೇಲೆ ಅವರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ನಾನು ಏಕೆ ಜಾಮೀನು ಕೊಡಬೇಕು ಎಂದು ಒಂದು ಹೇಳಿಕೆ ಕೊಟ್ಟರೆ ನನಗೆ ಅವಮಾನ ಆಗಿದೆ ಎಂದು ಹೇಳಿ ಅವನು ಲಾಯರ್ ನೋಟಿಸ್ ಕೊಡಿಸುತ್ತಾನೆ, ನೀನು 25 ಲಕ್ಷ ರೂ. ದಂಡ ಕಟ್ಟಬೇಕು ಇಲ್ಲದಿದ್ದರೆ ನಾನು ಕೋರ್ಟಿಗೆ ಹೋಗುತ್ತೇನೆ ಎನ್ನುವುದಾದರೆ ಇಲ್ಲಿ ಇವತ್ತು ಎಲ್ಲಾ ಶಾಸಕರು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ನಾವು ಕೆಲವು ದಾಖಲೆಗಳನ್ನು ಅವರಿಗೆ ಕೊಟ್ಟಿದ್ದೇವೆ. ದಯಮಾಡಿ ಏನು ಚರ್ಚೆ ಮಾಡದೇ ನೇರವಾಗಿ ಇದನ್ನು ಹಕ್ಕುಚ್ಯುತಿಗೆ ರೆಫರ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಈ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಈಗ ಸರ್ಕಾರ ಏನು ಹೇಳುತ್ತದೆಂಬುದನ್ನು ಕೇಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದೇನು ಶಾಸಕರಿಗೆ ಅವಮಾನ ಆಗಿದೆ, ಸದಸ್ಯರು ಮಾತನಾಡಲಿ, ನಾನು ಏಕೆ ಎರಡೇ ನಿಮಿಷದಲ್ಲಿ ಮುಗಿಸಿದೆ ಅಂದರೆ ಉಳಿದ ಸದಸ್ಯರು ಸಹಿ ಮಾಡಿದ್ದಾರೆ. ಅವರು ಮಾತನಾಡಲಿ ಎಂದು. ದಯಮಾಡಿ ಮಾನ್ಯ ಅಧ್ಯಕ್ಷರೇ ಇದು ಎಲ್ಲರಿಗೂ ಸಂಬಂಧಪಟ್ಟಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಶಾಸಕರು ಹೋರಾಟಗಳನ್ನು ಮಾಡುವುದು, ಆ ಹೋರಾಟಗಳ ಮೂಲಕ ಜನಗಳ ಕಷ್ಟಕ್ಕೆ ಆಧಾರವಾಗುವುದು. ಆ ಮೂಲಕ ನಮ್ಮ ದಾರಿ ನೋಡಿಕೊಳ್ಳುವುದು ಹೊಸ ವಿಷಯವಲ್ಲ ಮಾನ್ಯ ಅಧ್ಯಕ್ಷರೇ ಅದರಲ್ಲಿ ಕೆಲವು ಸಾಮಾಜಿಕ ಘಟನೆಗಳಿಗೆ ಹೋರಾಟಗಳು ಆಗುತ್ತವೆ, ಕೆಲವು ಸಮಸ್ಯೆಗಳು ರೈತರದ್ದು ಇರಬಹುದು, ಕಾರ್ಮಿಕರದ್ದು ಇರಬಹುದು, ಮತ್ತೊಬ್ಬರದ್ದು ಇರಬಹುದು, ಹೋರಾಟಗಳನ್ನು ಮಾಡುವುದು ಅನಿವಾರ್ಯವಾಗುತ್ತದೆ. ನಾವು ಏನೂ ಮಾಡಲೇಬಾರದು ಶಾಸಕರಾದವರು ಕೋರ್ಟಿನಲ್ಲಿ ನಿಂತುಕೊಳ್ಳುವುದಕ್ಕೆ ಹೆದರಿಕೊಳ್ಳಬೇಕು ಎನ್ನುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದು ಪ್ರಜಾಪ್ರಭುತ್ವಕ್ಕೆ ಅಷ್ಟೊಂದು ಕ್ಷೇಮಕರ ಎಂದು ನಾನು ಭಾವಿಸಿಲ್ಲ. ಇದು ಶೃಂಗೇರಿ ಶಾಸಕರು ಒಬ್ಬರ ಗೌರವದ ಪ್ರಶ್ನೆ ಅಲ್ಲ ಅಧ್ಯಕ್ಷರೇ. ನಾವೆಲ್ಲಾ ಕೋರ್ಟ್‌ಗಳ ಮುಂದೆ ನಿಂತಿದ್ದೇವೆ. ಪೋಲೀಸ್‌ನವರು ನಮ್ಮನ್ನು ಅರೆಸ್ಟ್ ಮಾಡಿ ತೋರಿಸಿದ್ದಾರೆ. ನಮ್ಮನ್ನೆಲ್ಲಾ ಕಸ್ಟಡಿಯಲ್ಲಿ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದೇವೆಂದು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ ಇದು ಶಾಸಕರ ಗೌರವದ ಪ್ರಶ್ನೆಯಾಗಿದೆ. ಏನಾಗಿದೆ ಅಂದರೆ ಒಬ್ಬ ಶಾಸಕರು ಮಾತನಾಡುವುದಕ್ಕೆ ಮೊದಲೇ ಅವರು ಏನು ಆಡಿದರು ಎಂದು ಹೇಳಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣ ಮಾಡುತ್ತಿದ್ದರಾ? ಅಲ್ಲಿ ಏನಾದರೂ ಕಾನೂನು ಬಾಹಿರ ಚಟುವಟಿಕೆಯಾಗುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದರಾ? ಅಲ್ಲಿ ಏನಾದರೂ ಅವರ ಮಾತಿನಿಂದ ಅಲ್ಲೋಲ ಕಲ್ಲೋಲವಾಗುವಂತಹ ಸ್ಥಿತಿ ನಿರ್ಮಾಣವಾಗುತ್ತಿತ್ತೇ? ಇದು ಯಾವುದನ್ನು ವಿವೇಚನೆಗೆ ತೆಗೆದುಕೊಳ್ಳುವುದಕ್ಕೆ ಮೊದಲೇ ಒಬ್ಬ ಅಧಿಕಾರಿ ಅಲ್ಲಿ ಅವರು ಸ್ಟೇಷನ್ ಹೌಸ್ ಆಫೀಸರ್ ಅಲ್ಲ. ಡ್ಯೂಟಿಯಲ್ಲಿರಬೇಕಾದ ಅಧಿಕಾರಿಯೂ ಅಲ್ಲ, ಅವರು ಸಬ್ ಇನ್ಸ್‌ಪೆಕ್ಟರ್ ಅಲ್ಲ, ಅಥವಾ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲ. ಅವರೊಬ್ಬರು ಉನ್ನತ ಅಧಿಕಾರಿ ಡಿವೈಎಸ್‌ಪಿ ಅವರು. ಏಕಾಏಕಿ ಹೋಗಿ ಕೊರಳು ಪಟ್ಟಿ ಹಿಡಿದುಕೊಂಡು ಬಂದು ವ್ಯಾನ್‌ಗೆ ತುಂಬಿ ಕಸ್ಟಡಿಯಲ್ಲಿ ಕೂರಿಸಿ ಅದೇ ಆ ಸ್ಟೇಷನ್ ಇನ್‌ಚಾರ್ಜ್ ಇರುವ ಆಫೀಸರ್ ಸಹಾನುಭೂತಿ ತೋರಿಸಿ ನನ್ನ ಸ್ಟೇಷನ್‌ನಲ್ಲಿ ಈ ರೀತಿ ಶಾಸಕರು ಕುಳಿತುಕೊಳ್ಳಬಾರದು, ಕೂರಿಸಿರುವುದು ತಪ್ಪು ಎಂದು ಹೇಳಿ ಭಾವನೆ ವ್ಯಕ್ತಪಡಿಸಿದಾಗ ಕೂಡ ಅಮಾನುಷವಾಗಿ ವರ್ತಿಸುವುದು ಖಂಡನೀಯ. ಸರ್ಕಾರ ಇದಕ್ಕೆ ಏನಾದರೂ ಒಂದು ತಡೆ

ತರಬೇಕಾಗುತ್ತದೆ. ಅಲ್ಲಿರುವ ಸ್ಟೇಷನ್ ಇನ್‌ಚಾರ್ಜ್ ಇವರಿಂದಾಗಿ ನನಗೆ ಕಷ್ಟವಾಗಿದೆ ಲಾ ಅಂಡ್ ಆರ್ಡರ್‌ನ್ನು ನಾನು ನಿಭಾಯಿಸುವುದಕ್ಕೆ ಆಗುತ್ತಿಲ್ಲ, ಇವರ ಮೇಲೆ ಏನಾದರೂ ಕ್ರಮ ಜರುಗಿಸಬೇಕು ಎಂದು ಏನಾದರೂ ಮಾನ್ಯ ಜಿಲ್ಲಾಧಿಕಾರಿಗಳಿಗೆ ಆಗಲಿ ಅಥವಾ ಸೂಪರಿಟೆಂಡೆಂಟ್ ಆಫ್ ಪೊಲೀಸ್‌ಗೆ ಆಗಲಿ ಮನವಿ ಮಾಡಿಕೊಂಡು ಅವರ ಮೇಲೆ ನಾನು ಕ್ರಮ ಜರುಗಿಸಲೇಬೇಕು. ಈ ದಿಸೆಯಲ್ಲಿ ನನಗೆ ಮಾರ್ಗದರ್ಶನ ಮಾಡಿ ಎಂದು ಕೇಳುವುದು ವಾಡಿಕೆ. ಡಿವೈಎಸ್‌ಪಿ ಯವರೇ ಏಕಾಏಕಿ ಹೋಗಿ ಲಾ ಅಂಡ್ ಆರ್ಡರ್ ಅನ್ನು ಎನ್‌ಪೋರ್ಸ್ ಮಾಡುವ ಸ್ಥಿತಿ ನಿರ್ಮಾಣವಾಗಿರುವುದು ಈ ರಾಜ್ಯದ ದುರ್ದೈವ ಅಧ್ಯಕ್ಷರೇ. ಅದು ಮಾಡಬೇಕಾದುದು ಅವರಲ್ಲ. ಅಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಇದ್ದಾರೆ. ಅವರನ್ನು ಮೀರಿ ಅಲ್ಲೊಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ. ಅವರನ್ನು ಆ ಸ್ಟೇಷನ್ ಇನ್‌ಜಾರ್ಜ್ ಎಂದು ಕರೆಯುತ್ತೇವೆ. ಜೂರಿಸ್‌ಡಿಕ್ಷನ್ ಅಫೀಸರ್ಸ್ ಅವರು ಕೋರ್ಟಿಗೆ ಬಂದು ನಿಂತುಕೊಂಡು ಸಾಕ್ಷಿ ಹೇಳಬೇಕಾದವರು ಅವರು. ಡಿವೈಎಸ್‌ಪಿಯವರು ಕೋರ್ಟಿಗೆ ಬರುವುದಿಲ್ಲ. ಇವರು ಏಕೆ ಹೋದರು? ಇವರು ಏಕೆ ಆ ವಾತಾವರಣವನ್ನು ಅಲ್ಲಿ ಸೃಷ್ಟಿ ಮಾಡಿದರು? ಇವರಿಗೆ ಏನು ಇತ್ತು? ಈ ಹಿನ್ನೆಲೆಯಲ್ಲಿ ನೋಡಿದಾಗ ಅಲ್ಲಿ ಒಂದು 8–10 ಕ್ಲಬ್‌ಗಳನ್ನು ನಿಲ್ಲಿಸಿ ಎಂದು ಆ ಶಾಸಕರು ಮನವಿ ಮಾಡಿದ್ದರೂ ಕೂಡ ಅವುಗಳನ್ನು ನಿಲ್ಲಿಸಲಿಲ್ಲ. ಅವರಿಗೆ ಮಾಮೂಲಿ ಹೋಗುತ್ತಿರುತ್ತದೆಯೋ ಏನೋ, ಅದಕ್ಕೆ ನಿಲ್ಲಿಸಲಿಲ್ಲ ಎಂದು ಮಾತನಾಡಿರುವುದನ್ನು ಒಂದು ಸೇಡಾಗಿ ಇಟ್ಟುಕೊಂಡು ಒಬ್ಬ ಅಧಿಕಾರಿ ಇಂತಹ ಸಮಯವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಬಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಯಾರೂ ಪ್ರಜಾಪ್ರತಿನಿಧಿಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದನ್ನೇ ದೊಡ್ಡದು ಮಾಡಿಕೊಂಡು ಸರ್ಕಾರದ ಪರ್ಮಿಶನ್ ತೆಗೆದುಕೊಂಡಿಲ್ಲ. ಸರ್ಕಾರವನ್ನು ಕೇಳಿಲ್ಲ, ಅಥವಾ ತಮ್ಮ ಗಮನಕ್ಕೆ ತಂದಿಲ್ಲ. ನಮ್ಮ ರಕ್ಷಣೆ ಮಾಡಬೇಕಾಗಿರುವುದು ಮಾನ್ಯ ಅಧ್ಯಕ್ಷರು. ನಾನು ಶಾಸಕನಾಗಿದ್ದಾಗ ನನ್ನ ಮೇಲೆ ಒಂದು ಕೇಸ್ ಹಾಕುತ್ತಿದ್ದಾನೆ ಒಬ್ಬ ಅಧಿಕಾರಿ, ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡುತ್ತಾರೆ ಅಂದರೆ ಕನಿಷ್ಟ ಇಲ್ಲಿಂದ ಒಂದು ಪರ್ಮಿಶನ್ ತೆಗೆದುಕೊಳ್ಳಬೇಕಾಗಿತ್ತು ಅವನು. ನನಗೆ ಈ ತರಹ ಕೆಲಸ ಮಾಡುವುದಕ್ಕೆ ಅಡ್ಡಿ ಮಾಡಿದ್ದಾರೆ. ನನಗೆ ಈ ತರಹ ಕೆಲಸ ಮಾಡುವುದಕ್ಕೆ ಅಡ್ಡಿ ಮಾಡಿದ್ದಾರೆ. ನನಗೆ ಈ ತರಹ ಅವಹೇಳನ ಮಾಡಿದ್ದಾರೆ. ಹೀಗಾಗಿ ನನ್ನ ಗೌರವಕ್ಕೆ ಚ್ಯುತಿ ಆಗಿದೆ, ನನ್ನ ಮಾನ ಹರಣ ಆಗಿದೆ, ನಾನು ಮಾನನಷ್ಟ ಮೊಕದ್ದಮೆ ಹಾಕುತ್ತೇನೆ ಎಂದು ಕೇಳುವಷ್ಟು ಸೌಜನ್ಯವಾದರೂ ಇರಬೇಕು, ಅಥವಾ ಸರ್ಕಾರಕ್ಕಾದರೂ ಪೂರ್ಣ ಮಾಹಿತಿ ಕೊಡಬೇಕು. ಅದಕ್ಕೆ ನಾನು ಇಲ್ಲ ಎನ್ನುವುದಿಲ್ಲ. ಅವರೂ ಈ ದೇಶದ ಒಬ್ಬ ಪ್ರಜೆ. ಅವರಿಗೆ ಚ್ಯುತಿಯಾಗಿದ್ದರೆ ಮಾಡಬೇಕಾಗಿತ್ತು. There is an exemption.

ನಿಮ್ಮ defarmation ಕೇಸ್‌ನಲ್ಲಿ 9ನೇ ಎಗ್ಜಂಪ್ಷನ್ ಸ್ಪಷ್ಟವಾಗಿ ಹೇಳುತ್ತದೆ. ಯಾರಾದರೂ ಒಬ್ಬರು ಸಾರ್ವಜನಿಕರ ಹಿತದೃಷ್ಟಿಯಿಂದ ಒಬ್ಬ ಅಧಿಕಾರಿಗೆ ನಾವು ಮಾತನಾಡಿದಾಗ that cannot be treated as defamation. ಎಂದು ಹೇಳಿ. ಅದಕ್ಕೆ ನಾನು ನಿಮಗೆ ಕನ್‌ವಿನ್ಸ್ ಮಾಡಲಿಕ್ಕೆ ಎದ್ದಿದ್ದೇನೆ. ಆತ defamation case ಹಾಕಬೇಕಾದರೆ ಮಿಸ್ಟರ್ ಶೃಂಗೇರಿ ಶಾಸಕರು ವೈಯಕ್ತಿಕವಾಗಿ ಏನಾದರೂ ಆಸಕ್ತಿ ಇಟ್ಟುಕೊಂಡು ಮಾತನಾಡಿದ್ದರಾ? ಸಾರ್ವಜನಿಕರ ಹಿತಾಸಕ್ತಿಯಿಂದ ಮಾತನಾಡಿದ್ದರಾ ಎನ್ನುವುದನ್ನು ನೋಡ ಬೇಕಾಗುತ್ತದೆ. ನಾನೂ ಕೂಡ ನಾಳೆ ಮಾತನಾಡಬೇಕಾಗುತ್ತದೆ ಅಧ್ಯಕ್ಷರೇ? ನನ್ನ ಕ್ಷೇತ್ರದಲ್ಲಿ ಇಷ್ಟು ಕ್ಲಬ್‌ಗಳು ನಡೆಯುತ್ತಿವೆ; ಅವುಗಳ ಮೂಲಕ ಇಷ್ಟು ಜೂಜು ಆಗುತ್ತಿದೆ. ಅದನ್ನು ನಿಲ್ಲಿಸದೇ ಹೋದರೆ ಇದರಲ್ಲಿ ಏನೋ ಬೇರೆ ಆಸಕ್ತಿ ಇರಬೇಕೆಂದು ನಾನು ಭಾವಿಸುತ್ತೇನೆ ಎನ್ನುವ ಮಾತನ್ನು ನಾನು ಆಡಬೇಕಾಗುತ್ತದೆ. ಇಲ್ಲದಿದ್ದರೆ ನನ್ನ ನಂಬಿಕೆಯನ್ನು ನನ್ನ ಕ್ಷೇತ್ರದಲ್ಲಿ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನೇ ದೊಡ್ಡದು ಮಾಡಿ ನನಗೆ ಮಾಮೂಲಿ ಹೋಗುತ್ತಿದೆ ಎಂದು ನೀವು ಪ್ರೆಸ್‌ನಲ್ಲಿ ಹೇಳಿದ್ದೀರಿ ಎಂಬ ಒಂದು ಕಾರಣಕ್ಕೆ defamation case ಹಾಕುವುದಾದರೆ, ನಾಳೆ ಈ ಮನೆಯ ಸದಸ್ಯರು ಜನಗಳಿಗೆ ಜವಾಬ್ದಾರರಾಗಿರಬೇಕಾಗುತ್ತದೆ? ನಾವು ನಮ್ಮ ಕರ್ತವ್ಯವನ್ನು ನಿಭಾಯಿಸುವುದು ಹೇಗೆ?

Coming to section 144. ಸನ್ಮಾನ್ಯ ಅಧ್ಯಕ್ಷರೆ ಇವತ್ತು ಈ ರಾಜ್ಯದ ಸ್ಥಿತಿ ಏನಾಗಿದೆ ಎಂಬ ಬಗ್ಗೆ ತಾವು ಮಾಹಿತಿ ತರಿಸಿ ನೋಡಬೇಕು. ಸಣ್ಣಪುಟ್ಟ ಘಟನೆಗೆ ಮಾತು ಎತ್ತಿದರೆ ಸೆಕ್ಷನ್ 144, 144, 144. ನನ್ನ ಕ್ಷೇತ್ರದಲ್ಲಿ ಮೈನ್ಸ್ ನಡೆಯುತ್ತಿದೆ, ಅಲ್ಲಿ ಹುಡುಗರು ಓಡಾಡುತ್ತಾರೆಂದು 5 ಸಲ ಸೆಕ್ಷನ್ 144 ಹಾಕಿದ್ದಾರೆ, ನಾನು ಮೊನ್ನೆ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್‌ರನ್ನು ಫೋನ್ ಮಾಡಿ ಕೇಳಿದೆ, ಏನು ತಾವು ಈ ಕಾಯ್ದೆಗಳ ಪರಿಣಾಮ ತಿಳಿದುಕೊಂಡಿದ್ದೀರಾ? ಸೆಕ್ಷನ್ 144 ಅಂದರೇನು ಎಂದು ತಿಳಿದುಕೊಂಡಿದ್ದೀರಿ? ಪ್ರತಿಬಂಧಕ ಆಜ್ಞೆ ಎಂದರೆ ಏನು ತಿಳಿದುಕೊಂಡಿದ್ದೀರಿ ಗೊತ್ತಾ, ಗೊತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ ಶಾಸಕರ ಗೌರವದ ಪ್ರಶ್ನೆಯನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಈ ಸೆಕ್ಷನ್ 144 ಇವೆಲ್ಲಾ ಹಾಕುವ ಮೊದಲೇ ಏನಾದರು ಒಂದು ಸ್ಥಿತಿ ನಿರ್ಮಾಣವಾಗಿದೆ ಎಂದು ಕನ್ವಿನ್ಸ್ ಮಾಡಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಹಾಕುವುದು ಒಳ್ಳೆಯದು. ಎರಡನೆಯದು ನಾವ್ಯಾರು ಗಲಾಟೆ ಮಾಡುವುದು ಸರಿ ಇತ್ಯಾದಿ ಧಾರ್ಮಿಕ ವಿಚಾರಗಳಿಗೆ ನಾನು ಹೋಗುವುದಿಲ್ಲ. ಸರ್ಕಾರಕ್ಕೆ ಕಾನೂನು ಪಾಲನೆ ಮಾಡುವ ಎಲ್ಲಾ ಹಕ್ಕಿದೆ, ಜವಾಬ್ದಾರಿ ಇದೆ. ಏನೋ ಒಂದು ಘಟನೆ ನಡೆಯುವುದಕ್ಕೆ ಮೊದಲೇ ಒಬ್ಬ ಶಾಸಕರ ಕೊರಳಪಟ್ಟಿಯನ್ನು ಹಿಡಿದುಕೊಂಡು ವ್ಯಾನಿಗೆ ತುಂಬಿಕೊಂಡು ಹೋಗಿ ಎಲ್ಲೋ ಒಂದು ಕಡೆ [illegible], ನಾನು ಡಿವೈಎಸ್‌ಪಿ ಹೇಳುತ್ತಿದ್ದೇನೆ ಇವರನ್ನು

ಆಚೆಗೆ ಬಿಡಬೇಡವೆಂದು ಹೇಳುವ ಸ್ಥಿತಿ ಈ ರಾಜ್ಯದಲ್ಲಿ ಕಾಣುವುದೆನೆಂದರೆ ಇದಕ್ಕಿಂತ ದುರ್ದೈವ ಬೇರೆ ಇಲ್ಲ. ಎರಡನೆಯದಾಗಿ, ಇವರು ಸರ್ಕಾರಿ ಅಧಿಕಾರಿಯೂ ಅಲ್ಲವೋ ಎನ್ನುವುದು ತೀರ್ಮಾನವಾಗಬೇಕಾಗುತ್ತದೆ. ಸರ್ಕಾರಿ ಅಧಿಕಾರಿಯಾಗಿದ್ದರೆ ಶಾಸಕರಿಗೆ ಈ ಡಿಫಮೇಷನ್‌ಗೆ ನೋಟಿಸ್ ಕೊಡುವ ಮೊದಲು ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಲಾಗಿದೆಯೇ ಎನ್ನುವುದನ್ನು ನಾವು ನೋಡಬೇಕು. ಇದೇ ಘಟನೆಯಲ್ಲಿ ಇನ್ನೊಂದು ರೆಫರೆನ್ಸ್ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ರಮೇಶ್ ಕುಮಾರ್‌ರವರು ಈ ಸದನದ ಅಧ್ಯಕ್ಷರಾಗಿದ್ದವರು, ಪತ್ರಿಕೆಗಳಲ್ಲಿ ಟಿವಿಗಳಲ್ಲಿ ನೋಡಿ ನಮಗೆ ದೊಡ್ಡ ಆಘಾತವಾಯಿತು. ಯಾವ ರಮೇಶ್‌ಕುಮಾರ್‌ರವರನ್ನು ಜಡ್ಜ್ ಎಂದು ತೋರಿಸಿಟ್ಟು ಅಥವಾ ಮುಖ್ಯಮಂತ್ರಿ ಸ್ಥಾನದಲ್ಲಿ ತೋರಿಸಿಬಿಟ್ಟು ಇಡೀ ರಾಜ್ಯಕ್ಕೆ ವೈಭವೀಕರಿಸಿದ್ದೆವು, ಆ ರಮೇಶ್‌ಕುಮಾರ್‌ರವರು ಒಂದು ಗಂಭೀರವಾದ ಕೇಸ್‌ನಲ್ಲಿ ಸಿಕ್ಕಿಹಾಕಿ ಕೊಂಡಿದ್ದಾರೆ, ಯಾವ ಕೇಸು? ನನಗೆ ಗೊತ್ತಿರಲಿಲ್ಲ, ನಾನು ತರಿಸಿಕೊಂಡು ನೋಡಿದೆ. ನಾನು ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಬೇಕಾಗಿದೆ, ಒಬ್ಬ ಆಡಳಿತಪಕ್ಷದ, ಅದರಲ್ಲೂ ಈ ಸದನದ ಅಧ್ಯರಾಗಿದ್ದವರ ಬಗ್ಗೆ ಇಂತಹ ಒಂದು ಗಂಭೀರವಾದ ಆಪಾದನೆ ಬಂದಾಗ ನೋಡಬೇಕಾಗಿದೆ, ಒಂದೂವರೆ ವರ್ಷವಾದ ನಂತರ, ಒಂದು ಸಿಓಡಿ ವರದಿಯಲ್ಲಿ ಯಾರೋ ಒಬ್ಬ ಅಧಿಕಾರಿ ಹೋಗಿ ತನಿಖೆ ಮಾಡಿಕೊಂಡು ಹುರುಳಿಲ್ಲವೆಂದು ಬರೆದ ಮೇಲೆ ಅಲ್ಲಿಗೆ ಬಂದ ಮತ್ತೊಬ್ಬ ಡಿವೈಎಸ್‌ಪಿ ಏಕಾಏಕಿಯಾಗಿ ಒಂದು ಕಡತವನ್ನು ಬಿಲ್ಟ್‌ಅಪ್ ಮಾಡಿ, ಇವರದ್ದು ಮತ್ತು ಇವರ ಸಹೋದರರ ಇನ್‌ವಾಲ್ವ್‌ಮೆಂಟ್ ನನಗೆ ಕಂಡುಬರುತ್ತದೆಂದರೆ, ವರದಿ ಕೊಡುವುದಕ್ಕೆ ಸಿಓಡಿ ನಿಯಮವಿದೆ, ಸರ್ಕಾರಕ್ಕೆ ಅಸಿಸ್ಟ್ ಮಾಡುವುದಕ್ಕೆ, ಅವರೇ ಡೈರೆಕ್ಟ್ ಆಗಿ ಹೋಗಿ ಚಾರ್ಜ್ ಶೀಟ್ ಫ್ರೇಂ ಮಾಡುವವರಲ್ಲ. ಮಾನ್ಯ ರಮೇಶ್ ಕುಮಾರ್‌ರವರು ಮರ್ಡರ್ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆಂದು ಏಕಾಏಕಿಯಾಗಿ ಡಿವೈಎಸ್‌ಪಿ ಪ್ರೆಸ್‌ಗೆ ರಿಲೀಸ್ ಮಾಡುತ್ತಾನೆ, without the permission of the authority. ಕಾನೂನು ಇದೆ, he is punishable under law. ಯಾವುದೇ ಸರ್ಕಾರಿ ವರದಿಯನ್ನು, ಯಾವುದೇ ತನಿಖೆಯನ್ನು ಸಂಬಂಧಪಟ್ಟ ಮೇಲಿನ ಅಧಿಕಾರಿಯ ಅನುಮತಿ ಇಲ್ಲದೆ ಯಾವ ಅಧಿಕಾರಿ ಲೀಕ್ ಮಾಡುತ್ತಾನೆ ಅವನ ಮೇಲೆ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದಿದೆ. ಆ ಡಿವೈಎಸ್‌ಪಿ ಲೀಕ್ ಮಾಡಿದರೆ ಇನ್ಯಾರೋ ಶ್ರೇಷ್ಠ ನ್ಯಾಯಾಲಯದಲ್ಲಿ ಕುಳಿತುಕೊಂಡು ಅರ್ಜಿ ಹಾಕಿದರು, ಆ ವರದಿಯನ್ನು ಹೈಕೋರ್ಟ್ ಪರಾಮರ್ಶೆ ಮಾಡಬೇಕೆಂದರು, ಅವತ್ತು ಸುದೈವ ಸಿಟಿಂಗ್ ಜಡ್ಜ್ ಹೇಳುತ್ತಾರೆ, ಇದಕ್ಕೂ ನನಗೂ ಸಂಬಂಧವಿಲ್ಲ ಹೋಗಿ ಎನ್ನುತ್ತಾರೆ. ಇದಾದ ಮೇಲೆ ಜಡ್ಜ್ ಬರುತ್ತಾರೆ, ಏಕಾಏಕಿಯಾಗಿ, 'Rameshkumar has to be secured' ಬಳಸಿರುವ ಪದ, if I

am right sir. ನಾನು ಓದಿರುವ ಮಾಹಿತಿ, ಚಾರ್ಜ್‌ಶೀಟ್ ಮಾಡಿ ನೋಡಿ ಈಗ ತನಿಖೆ ಮಾಡಿ ಎಂದು ಹೇಳಿಲ್ಲ, He must be secured. Mr. Rameshkumar and his brother has to be secured. ಆ ಪದದ ಅರ್ಥ ಎಲ್ಲಾದರೂ ಇದ್ದರೆ ಹುಡುಕಿ ತಂದು ನಮಗೆ ಒಪ್ಪಿಸಿ ಎಂದು, ಈಗ ತಾವು ಅವರನ್ನು ಒಪ್ಪಿಸಬೇಕು. ಈಗ ಅವರು ಇಲ್ಲಿದ್ದಾರೆ, ಕಾನೂನಿನ ವಾಖ್ಯಾನ ಏನು ಹೇಳುತ್ತದೆಂದರೆ, he must be secured through Hon'ble Speaker of this House. ನಾಳೆ ಶಾಸಕರು ಏನಾಗಬೇಕೆಂಬುದು ಅಧ್ಯಕ್ಷರೇ, ನಮಗೆ ಅರ್ಥವಾಗುತ್ತಿಲ್ಲ. ಏಕೆ ಈ ಡಿವೈಎಸ್‌ಪಿ ರ್‍ಯಾಂಕ್‌ನ ಅಧಿಕಾರಿಗಳು, ಸರ್ಕಲ್ ಇನ್ಸ್‌ಪೆಕ್ಟರ್ ರ್‍ಯಾಂಕ್‌ನ ಅಧಿಕಾರಿಗಳು, ಈ ರೀತಿ ಮಾಡುತ್ತಾರೆ? I am not here to argue on behalf of Mr. Rameshkumar ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. If at all he has committed any mistake under the law, any offence under the criminal law, let the Court take its own course. ನಾನು ಬೇಡವೆನ್ನುವುದಿಲ್ಲ. ಆದರೆ ಮಧ್ಯಂತರದಲ್ಲಿ ಡಿವೈಎಸ್‌ಪಿಗಳು ಇವತ್ತು ನಮ್ಮನ್ನು ಆಳುವ ಸ್ಥಿತಿಗೆ ಬಂದರೆ ಡಿವೈಎಸ್‌ಪಿಗಳು ನಮ್ಮ ಚರಿತ್ರೆ ಅಥವಾ ನಮ್ಮನ್ನು ದೊಡ್ಡ ಮನುಷ್ಯರನ್ನಾಗಿ ಮಾಡುವ ಸ್ಥಿತಿಗೆ ಬಂದರೆ ನಾವು ಎಲ್ಲಿಗೆ ಹೋಗಬೇಕು? ಯಾರು ನಮ್ಮ ರಕ್ಷಣೆಗೆ ಬರುತ್ತಾರೆ, ಎಲ್ಲಿಗೆ ಈ ಆಡಳಿತ ಹೋಗುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತೇನು ಶೃಂಗೇರಿ ಶಾಸಕರಾದ ಜೀವ್‌ರಾಜ್‌ರವರಿಗಾಗಿದೆ, ಇದನ್ನೇನಾದರೂ ತಾವು ಛೀಮಾರಿ ಮಾಡದಿದ್ದರೆ, ಇದಕ್ಕೆ ನೀವೇನಾದರೂ ರಕ್ಷಣೆ ಕೊಡದೆ ಹೋದರೆ ಯಾವುದೇ ಶಾಸಕ ನಾಳೆ ಶಾಸಕರಾಗಿ ಈ ರಾಜ್ಯದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ನಾಳೆ ನಾನೊಂದು ಕೆಡಿಬಿ ಸಭೆ ಮಾಡುವಾಗ ಇನ್ಯಾವುದೊ ರಿವ್ಯೂ ಮಾಡುವಾಗ, ಆಕಸ್ಮಾತ್ ಒಂದು ಮಾತನಾಡಿದರೆ, he may go against a case. ಅಧಿಕಾರಿ ನಮ್ಮ ಮೇಲೆ ಅಲ್ಲಿ ಹೋಗಿ ಡೆಫರ್‌ಮೇಷನ್ ಕೇಸ್ ಹಾಕಬಹುದು, ಏಕೆಂದರೆ ಅದೆಲ್ಲಾ ಪತ್ರಿಕೆಯಲ್ಲಿ ಬಂದುಬಿಡುತ್ತದಲ್ಲಾ. ಹಾಗಾದರೆ ನಾವು ಬಾಯಿ ಹೊಲಿದುಕೊಂಡು ಶಾಸಕರು ಕೆಲಸ ಮಾಡಬೇಕೆ ಎಂದು ಕೇಳಬೇಕಾಗಿದೆ. ಇವತ್ತೇನು ಶೃಂಗೇರಿ ಶಾಸಕರಿಗಾಗಿದೆ ಇದನ್ನು ವೈಯಕ್ತಿಕವೆಂದು ಭಾವಿಸುವುದು ಬರಡಾದರೆ, ಎರಡನೆಯದು ಇಡೀ ಶಾಸನ ಸಭೆಯ ಹಕ್ಕಿಗೆ ಚ್ಯುತಿಯಾಗಿದೆ ಎನ್ನುವುದು ನನ್ನ ಭಾವನೆ. ಏಕೆಂದರೆ ಒಬ್ಬ ಅಧಿಕಾರಿ ನಿಜ, ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು, ಅವರನ್ನು ಗೌರವಾನ್ವಿತವಾಗಿ ಕರೆದುಕೊಂಡು ಹೋಗಬೇಕಾಗಿತ್ತು, ಅವರನ್ನು ವಾರ್ನ್ ಮಾಡಿಬಿಡಬೇಕಾಗಿತ್ತು, ಅದನ್ನೆಲ್ಲಾ ಪ್ರಿವಿಲೇಜ್‌ನಲ್ಲಿ, ಕೌಲ್ ಅಂಡ್ ಶೆಕ್ದಾರ್ ಪುಸ್ತಕದಲ್ಲಿ, ಹೇಗೆ ಒಬ್ಬ ಶಾಸಕರನ್ನು, ಸಂಸತ್ ಸದಸ್ಯರನ್ನು ಅರೆಸ್ಟ್ ಮಾಡಿದಾಗ ನಡೆದುಕೊಳ್ಳಬೇಕಾಗುತ್ತದೆಂದು ಕೋಟ್ ಮಾಡಿಬಿಟ್ಟಿದ್ದಾರೆ. ಅವರೇನೂ ಮರ್ಡರ್ ಕೇಸ್‌ನಲ್ಲೆ ಇರಲಿಲ್ಲ, ಇನ್ಯಾವುದೋ ರೇಪ್ ಕೇಸ್‌ನಲ್ಲಿ ಅವರು ಇರಲಿಲ್ಲ.

ನೀವು ಸೆಕ್ಷನ್ 143, 144 ಘೋಷಣೆ ಮಾಡಿದಾಗ, ಪ್ರತಿಭಟನೆ ಮಾಡುವವರೆಲ್ಲಾ ನಿಂತುಕೊಂಡೇ ನಿಂತುಕೊಳ್ಳುತ್ತೇವೆ, ಸ್ಟ್ರೈಕ್ ಮಾಡುತ್ತೇವೆಂದು ಹೇಳೇ ಹೇಳುತ್ತೇವೆ, ಇಲ್ಲವೆಂದರೆ ಈ ರಾಜ್ಯದಲ್ಲಿ ನಮ್ಮ ಫಂಡಮೆಂಟಲ್ ರೈಟ್ಸ್ ನಾನೇನಾದರೂ ಪ್ರತಿಭಟಿಸಬೇಕೆನ್ನುವ ಹಕ್ಕಿಗೆ ಅರ್ಥವೇ ಉಳಿಯುವುದಿಲ್ಲ. ಅದನ್ನೇ ದೊಡ್ಡ ಅಪರಾಧವೆಂದು ಕನ್ಸಿಡರ್ ಮಾಡಿ ಅವರನ್ನು ಅರೆಸ್ಟ್ ಮಾಡಿರುವುದೊಂದು ತಪ್ಪಾದರೆ, ಅವರ ವಿರುದ್ಧವಾಗಿ ಇವತ್ತು ಡೆಫಮೇಷನ್ ನೋಟಿಸನ್ನು ದುಡ್ಡು ಇದೆ ಎಂದು, ಇಪ್ಪತ್ತೈದು ಲಕ್ಷ ರೂಪಾಯಿಗಳ ನೋಟಿಸ್ ಕೊಟ್ಟರೆ, ಆ ಅಧಿಕಾರಿ ಇವತ್ತು ಎರಡು ಲಕ್ಷ ರೂಪಾಯಿಗಳ ಸ್ಟ್ಯಾಂಪ್ ಕಟ್ಟಬೇಕು, ಡಿಫಮೇಷನ್ ಕೇಸ್ ಹಾಕಬೇಕಾದರೆ ಇವತ್ತು ಟೆನ್ ಪರ್ಸೆಂಟ್ ಡೆಫಾಸಿಟ್ ಮಾಡಬೇಕಾಗಿದೆ. 25 ಲಕ್ಷ ರೂಪಾಯಿಗಳ ಡೆಫಮೇಶನ್ ಕೇಸ್‌ಗೆ ಎರಡೂವರೆ ಲಕ್ಷ ರೂಪಾಯಿಗಳ ಡಿಪಾಸಿಟ್ ಕಟ್ಟುತ್ತಾರೆಂದರೆ, ನಾಳೆ ಅವರ ಆಸ್ತಿಯನ್ನು ಆಸೆಸ್ ಮಾಡಿಸಬೇಕೆಂದು ನಾನು ಕೇಳುತ್ತೇನೆ. ಅದನ್ನು ಮಾಡುತ್ತಾರೆಂದು ತಿಳಿದುಕೊಂಡು ನಾವು ಮಾತನಾಡುತ್ತಿರುವುದು ಸಾರ್, ಅಷ್ಟೊಂದು ಇನ್‌ಕಂ ಎಲ್ಲಿಂದ ಬರುತ್ತದೆ ಎಂದಾದರೂ ನಾವು ಕೇಳಬೇಕಾಗುತ್ತಲ್ಲಾ, in case if it goes before the court. He has proved his intention to go before the court. He has told. ನಾನು ಇಷ್ಟು ಲಕ್ಷ ರೂಪಾಯಿಗಳ ಮಾನನಷ್ಟ ಮೊಕದ್ದಮೆಯನ್ನು ನಿಮ್ಮ ಮೇಲೆ ಹಾಕುತ್ತಿದ್ದೇನೆಂದರೆ ಮೇಲೆ he must deposit 10% of the amount. ಮತ್ತೆ ಅವರ ಮರ್ಯಾದೆ ಮಾನ ಎಷ್ಟು ಲಕ್ಷಕ್ಕೆ ಬಾಳುತ್ತದೆ ಎನ್ನುವುದು ಸಭೆಗೆ ಗೊತ್ತಾಗಬೇಕು, ಮಾನ್ಯ ಅಧ್ಯಕ್ಷರು ನಮ್ಮ ಶಾಸಕರದ್ದು ಎಷ್ಟು ಲಕ್ಷಕ್ಕೆ ಬಾಳುತ್ತದೆಂದು ಹೇಳಬೇಕು. ಈಗ ನಮ್ಮನ್ನು ಹಿಡಿದು ಕೊಳ್ಳಪಟ್ಟಿ ಹಿಡಿದು ಜೈಲಿಗೆ ಹಾಕಿದರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ನನ್ನ ವಿಚಾರವನ್ನು ಪ್ರಸ್ತಾಪ ಮಾಡಿದಕ್ಕೆ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ, ಪಾರ್ಲಿಮೆಂಟರಿ ಆಫೇರ್ಸ್ ಮಿನಿಸ್ಟರ್ ಇದ್ದಾರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರಿದ್ದಾರೆ, ಮಾನ್ಯ ಡಿ. ಮಂಜುನಾಥ್‌ರವರು ಆ ಮನೆ ಮತ್ತು ಈ ಮನೆಯಲ್ಲಿ ಪ್ರಿಸೈಡಿಂಗ್ ಆಫೀಸರ್ ಆಗಿ ಕೆಲಸ ಮಾಡಿದ್ದಾರೆ. ಅಧ್ಯಕ್ಷರೆ ಈ ನೋಟಿಸ್ ಅನ್ನು ತಾವು ನೋಡಿ ಪ್ರಕಾಶ್‌ರವರೇ, ಲೀಗಲ್ ನೋಟಿಸ್ ಅನ್ನು ತಾವು ಓದಬೇಕು, ಆತನ ಅವೇರ್‌ಮೆಂಟ್ ನಮ್ಮ ಸಹೋದ್ಯೋಗಿ ಜೀವರಾಜ್‌ರವರ ಮೇಲೆ ಏನು? ನೀವು ನನ್ನ ಮೇಲೆ ವೆಯಲೆಂಟ್ ಆಗಿ ಭಾಷೆಯನ್ನು ಬಳಸಿದ್ದೀರಿ, ಡೆಫಮೇಟರಿ ಭಾಷೆ ಉಪಯೋಗಿಸಿದ್ದೀರಿ ಮೋಟಿವ್ಸ್ ಇಂಪ್ಯೂಟ್ ಮಾಡಿದ್ದೀರಿ, ಈ ಎಲ್ಲಾ ಆಪಾದನೆಗಳನ್ನು ಸಬ್‌ಸ್ಟ್ಯಾನ್ಸಿಯೇಟ ಮಾಡಿಕೊಳ್ಳುವುದಕ್ಕೆ ನಾನು ಹೇಳುವುದೇನೆಂದರೆ, 'ಗೂಳಿಯಂತೆ ನುಗ್ಗಿದ್ದೀರೆಂದು' ನನ್ನ ಮೇಲೆ ಹೇಳಿದ್ದೀರಿ ಕಲ್ಲೇಟಿನಿಂದ ನಮ್ಮ ಕಾರ್ಯಕರ್ತರು ನಿಮ್ಮ ಹಣೆಗೆ ಹೊಡೆದಿದ್ದರೆ, ಹಾಗೆ ಒಂದು ವೇಳೆ ಆಗಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ, ಪ್ರೈಮಾಫೇಸಿ, ಇಷ್ಟು ಮಾತ್ರಕ್ಕೆ

ಈ ವ್ಯಕ್ತಿತ್ವದ ಅಧಿಕಾರಿಗೆ ಅಪಮಾನವಾಯಿತೆಂದು ಒಬ್ಬ ಶಾಸಕರಿಗೆ ಲೀಗಲ್ ನೋಟಿಸ್ ಕೊಡುತ್ತಾರೆಂದರೆ, ನಾವು ಎಲ್ಲಿಗೆ ಹೋಗಿ ತಲುಪುತ್ತಿದ್ದೇವೆ? ಯಾವ ಶಾಸಕ ಕೆಲಸ ಮಾಡುವುದಕ್ಕಾಗುತ್ತದೆ? ಇದು ಯಾವ ತರಹದ ಡಿಸೈನ್, ಎಲ್ಲಿಂದ ಎಲ್ಲಿಗೆ ನಾವು ಹೋಗುತ್ತಿದ್ದೇವೆ. ಆತನ ಡಿಫೆನ್ಸ್ ನೋಡಿ, ಹೊಸದಾಗಿ ನಾವೇನೂ ಡಾಕ್ಯುಮೆಂಟ್ ಸದನಕ್ಕೆ ಸಪ್ಲೈ ಮಾಡಬೇಕಾದ್ದಿಲ್ಲ, ಆತನ ಡಿಫೆನ್ಸ್ ಏನೆಂದರೆ, ನಾನು ಪ್ರಾಮಾಣಿಕ, ನನ್ನ ಕ್ಲೈಂಟ್ ಅದ್ವಿತೀಯ ನಾಯಕ, ಅವನು ದೊಡ್ಡ ಮನುಷ್ಯ, ಅವನ ಕೆರಿಯರ್ ಚೆನ್ನಾಗಿದೆ, ಇವರೇನು ಜೀವರಾಜ್‌ರವರ ಮೇಲಿನ ಅಧಿಕಾರಿಗಳೇ? ಆತನ ಕಾನ್ಫಿಡೆನ್ಶಿಯಲ್ ರೆಕಾರ್ಡ್ ಅನ್ನು ಇವರು ನೋಡಿದ್ದಾರಾ? ಅವನು ಒಳ್ಳೆಯವನೋ ಕೆಟ್ಟವನೋ, ಸಸ್ಪೆಂಡ್ ಆಗಿದ್ದನೋ ಆಗಿರಲಿಲ್ಲವೋ, ಹಾನ್‌ಸ್ಟೋ, ಡಿಸ್‌ಹಾನೆಸ್ಟೋ, ನೋಟಿಸ್ ಇತ್ತೋ ಇಲ್ಲವೋ, ಇವರಿಗೆ ಹೇಗೆ ಗೊತ್ತಾಗಬೇಕು? ಅದು ಗೊತ್ತಾಗುವುದು ಅವರ ಮೇಲಿನಾಧಿಕಾರಿಗಳಿಗೆ, ಸರ್ಕಾರ ನಿನಗೆ ಪೋಸ್ಟಿಂಗ್ಸ್ ಕೊಟ್ಟಿದೆ ನೀನು ಅಲ್ಲಿ ಬಂದು ಕೆಲಸ ಮಾಡುತ್ತಿದ್ದಿಯಾ, ಮತ್ತೆ ನೀನೇ ಒಪ್ಪಿಕೊಳ್ಳುತ್ತಿಯಾ, proceedings under law as established by law ಆಗಬೇಕಾಗಿರತಕ್ಕ ಎಲ್ಲಾ ಕೆಲಸವನ್ನೂ ಕೂಡ, ಸ್ಟೇಷನ್ ಹೌಸ್ ಆಫೀಸರ್ ಯಾರಿದ್ದಾರೆ, ಅವರು ನಡೆಸಿಕೊಂಡು ಹೋಗಿದ್ದಾರೆ ಹಾಗಾದರೆ ನಿನ್ನ ಪ್ರಶ್ನೆ ಎಲ್ಲಿ ಬಂತು? Where do you come into the picture? ಸ್ಟೇಷನ್ ಹೌಸ್ ಆಫೀಸರ್ ಯಾರು ಇದ್ದರು, ಅವರು ಸೆಕ್ಯೂರ್ ಮಾಡಿಕೊಂಡರು, ಯಾವ ಕಲಂನ್ನು ಇವರ ಮೇಲೆ ಹಾಕಬೇಕಾಗಿತ್ತೋ ಹಾಕಿದ್ದಾರೆ. ಜ್ಯುಡಿಸಿಯಲ್ ಕಸ್ಟಡಿಗೆ ಕಳುಹಿಸಿದ್ದಾರೆ. All these things are over. ನೀನು ಯಾಕೆ ಬಂದೆ? ನಿನ್ನ ಪ್ರಶ್ನೆ ಎಲ್ಲಿ ಬಂತು? There is something that doesn't meet the eye. ನಮ್ಮ ಕಣ್ಣಿಗೆ ನೇರವಾಗಿ ಕಾಣದೇ ಇರತಕ್ಕಂಥದ್ದು ಯಾವುದೋ ಸತ್ಯವನ್ನು ಮುಚ್ಚಿಡಲಿಕ್ಕೆ ಅಥವಾ ಇವರು ಹೇಳಿರತಕ್ಕಂಥ ಯಾವುದೋ ಮಾತಿಗೆ ನೇರವಾಗಿ ಪ್ರತಿಭಟನೆ ಮಾಡುವುದಕ್ಕೆ ಸಾಧ್ಯ ಇಲ್ಲದೆ ಶಾಸಕರು ತನ್ನ ಕೆಲಸವನ್ನು ನಿರ್ವಹಣೆ ಮಾಡಲಿಕ್ಕೆ ಉದ್ದ್ಯಾಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ conscious ಆಗಿ ಈ ನೋಟೀಸ್ ಎನ್ನುವ ಅಸ್ತ್ರವನ್ನು ಬಳಸಿಕೊಂಡು ಮಾಡುತ್ತಿದ್ದಾರೆ ಎಂದು ಅನಿಸುತ್ತದೆ. ಕಮಿಟಿಗೆ ಏಕೆ ರೆಫರ್ ಮಾಡಬೇಕು? ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ, ನಾವು ಗೌರವಸ್ಥರಲ್ಲದೆ ಹೋದರೂ ನಮಗೆ ಗೌರವ ಕೊಡಿ, ನಾವು ಶಾಸಕರಾಗಿದ್ದೇವೆ ಎಂದು ಕೇಳುವ ಮಟ್ಟಕ್ಕೆ ನಾವು ಇಳಿದಿಲ್ಲ. ಶಾಸಕರಾದ ಮಾತ್ರಕ್ಕೆ ಅವತ್ತು ಚುನಾವಣೆಯಾಗುತ್ತದೆ, ಮತ ಎಣಿಕೆ ಮಾಡುತ್ತಾರೆ, ನಮ್ಮ ಅದೃಷ್ಟ. 4 ಮತ ಹೆಚ್ಚಿಗೆ ಬರುತ್ತದೆ. ಡಿಕ್ಲೇರ್ ಮಾಡುತ್ತಾರೆ. ಶಾಸಕರಲ್ಲದವರು ಗೌರವಸ್ಥರಲ್ಲ ಎಂದು ಹೇಳತಕ್ಕ ಒಂದು ಮೌಢ್ಯಕ್ಕೂ ನಾವು ಇಳಿದಿಲ್ಲ. ಆದರೆ ಈ ಸದನಕ್ಕೆ ತನ್ನದೇ ಆದಂಥ ಒಂದು ಗೌರವವಿದೆ. ನಮ್ಮ ಪುಣ್ಯನೋ, ಅದೃಷ್ಟವೋ ಜನರ ಇಷ್ಟವೋ ನಾವು ಇಲ್ಲಿ ಒಳಗೆ ಬಂದಿದ್ದೇವೆ.

ನಾವು ಈ ಸದನದ ಒಳಗೆ ಕೆಲಸ ಮಾಡುವ ವೇಳೆಗೆ ಸದನದ ಗೌರವ ನಮ್ಮ ಗೌರವದೊಟ್ಟಿಗೆ ಶಾಮೀಲಾಗಿರುತ್ತದೆ. ಇಂಥವರು ಈ ರೀತಿ ಪಡೆದುಕೊಳ್ಳತಕ್ಕಂಥದ್ದರಿಂದ ಸದನದ ಗೌರವಕ್ಕೆ ಎಷ್ಟು ಅಪಾಯವಾಗುತ್ತದೆ? ಯಾರು ಮುಂದೆ ಇಲ್ಲಿ ನಿರ್ಭಯವಾಗಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ನಾನಂತೂ ನಾನು ಹೇಳಿಕೊಳ್ಳುವುದಕ್ಕೇ ಹೋಗುವುದಿಲ್ಲ. ಸನ್ಮಾನ್ಯ ಮಾಧುಸ್ವಾಮಿಯವರಿಗೆ ಯಾರು ಬ್ರೀಫ್ ಮಾಡಿದರೋ ಸ್ವಲ್ಪ ಹೆಚ್ಚು ಕಡಿಮೆ ಇದ್ದುದನ್ನೆಲ್ಲಾ ಹೇಳಿದ್ದಾರೆ, ಆಯಿತು. ನಾನು ನನ್ನ ಹಣೆಬರಹವನ್ನು ಕೋರ್ಟಿನ್ನಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತೇನೆ. ಅಥವಾ ಮತ್ತೊಮ್ಮೆ ಅವಕಾಶ ಸಿಕ್ಕಿದಾಗ ಎಲ್ಲಾ ದಾಖಲೆಗಳನ್ನು ತಮಗೆ ನಾನು ಒಪ್ಪಿಸುತ್ತೇನೆ. ಎಲ್ಲಿಗೆ ನಾವು ಇಳಿದಿದ್ದೇವೆಂದು ಹೇಳಿದರೆ ಯಾವ ಶಾಸಕ ಕೆಲಸ ಮಾಡುವುದಕ್ಕಾಗುತ್ತದೆ? ಸ್ಟೇಷನ್ ಹೌಸ್ ಆಫೀಸರ್ ಕೇಸನ್ನು ರಿಜಿಸ್ಟರ್ ಮಾಡಿದರು. ನಿನ್ನ ಹಣೆಗೆ ಏಟು ಬಿತ್ತು. ಅವರು ಗೂಳಿ ನುಗ್ಗಿದಂತೆ ನುಗ್ಗಿದರು ಎಂದು ನಿನ್ನ ಮೇಲೆ ಹೇಳಿದರು. ನೀನ್ಯಾಕೆ ಹೋಗಿದ್ದೆ ಅಲ್ಲಿಗೆ? ಈ ಸದನದಲ್ಲಿ ಅನೇಕ ವೇಳೆ ನಾವು ಆರೋಪ, ಪ್ರತ್ಯಾರೋಪಗಳನ್ನು ಮಾಡಿಕೊಳ್ಳುವ ವೇಳೆಯಲ್ಲಿ ಎಂಥೆಂಥ ಭಾಷೆಯನ್ನು ಬಳಸುತ್ತೇವೆ. ಮಾನ್ಯ ಜೆ.ಹೆಚ್. ಪಟೇಲರು ಅಲ್ಲಿ ಕುಳಿತಿದ್ದರು. ಮಾನ್ಯ ಗುಂಡುರಾಯರು ಇಲ್ಲಿ ಕುಳಿತಿದ್ದರು. ಕೈ ಕೈ ಮಿಲಾಯಿಸಿಕೊಂಡು ಬಿಟ್ಟರು. ಇದೆಲ್ಲಾ ನಡೆದಿಲ್ಲವೇ? ನಿಜಲಿಂಗಪ್ಪನವರ ವಿಚಾರದಲ್ಲಿ ಶ್ರೀಮಾನ್ ಗೋಪಾಲಗೌಡರು ಬಳಸಿರತಕ್ಕ ಭಾಷೆ. ನಾವು ಒಂದು ಕ್ಷಣವೂ ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಜೀಜ್ ಸೇಠ್‌ರವರು ಈ ಸದನದಲ್ಲಿ ಮಾಡಿರತಕ್ಕ ಗಲಾಟೆ, ಏನು ಅಧ್ಯಕ್ಷರೇ? ಇದರಲ್ಲಿ ಪಕ್ಷ ಪಂಗಡದ ಪ್ರಶ್ನೆ ಇಲ್ಲ. ಸೈದ್ಧಾಂತಿಕವಾದ ವಿಚಾರ ಬಂದಾಗ ಅವರ ಜೊತೆಗೆ ನಾನು ಇಲ್ಲ. ನನ್ನ ಸಿದ್ಧಾಂತ ನನ್ನದು. ಅವರ ಸಿದ್ಧಾಂತ ಅವರದು. ಆದರೆ ಸಹೋದ್ಯೋಗಿಗಳಾಗಿ ನಾವು ಇಲ್ಲಿ ಸದನದಲ್ಲಿ ಶಾಸಕರುಗಳಾಗಿ ನಾವು ಒಟ್ಟಿಗೆ ಕೆಲಸವನ್ನು ಮಾಡುವಾಗ ಕನಿಷ್ಟವಾಗಿ ನಮಗೆ ಸಂವಿಧಾನಬದ್ಧವಾಗಿ ಇರತಕ್ಕ ಗೌರವ ನಮಗೆ, ಇರುವಂಥ ಹಕ್ಕು ಕೂಡ ಉಲ್ಲಂಘನೆಯಾದರೆ ಬಹುಶ: ನಾವ್ಯಾರೂ ಇಲ್ಲಿ ಸದನದಲ್ಲಿ ಇರಬೇಕಾದ ಅಗತ್ಯವೇ ಇಲ್ಲ. ಈತ ಈ ನೋಟೀಸನ್ನು ಕೊಡಲಿಕ್ಕೆ ಮೇಲಾಧಿಕಾರಿಗಳ ಅಥವಾ ಸರ್ಕಾರದಿಂದ ಪರವಾನಿಗೆಯನ್ನು ಪಡೆದಿದ್ದಾನಾ? ತಕ್ಷಣವೇ ವಿಚಾರಣೇ ಮಾಡಬೇಕು. If he has attempted to issue this notice to Mr. Jeevaraj without obtaining the permission from his higher authories, he should be kept under suspension forthwith. It is not a joke. ಸನ್ಮಾನ್ಯ ಮುಖ್ಯಮಂತ್ರಿಗಳು ಸಹೃದಯಿಗಳು. ನನ್ನ ಕಷ್ಟದಲ್ಲಿ ನಾನು ಹೋಗಿ ಅವರ ಎದುರಿಗೆ ನಿಂತಾಗ ಅತ್ಯಂತ ಗೌರವದಿಂದ ನನ್ನನ್ನು ನಡೆಸಿಕೊಂಡಿದ್ದಾರೆ. ನಮಗೆ ಕಾನೂನಿನ ಚೌಕಟ್ಟಿನೊಳಗೆ ಯಾವ ರೀತಿ ನೆರವನ್ನು ಕೊಡಬಹುದು ಅದನ್ನು ಕೊಟ್ಟಿದ್ದಾರೆ.

ಒಬ್ಬ ಹಿರಿಯಣ್ಣನಂತೆ ನನ್ನ ಜೊತೆಗೆ ನಿಂತುಕೊಂಡು ನನಗೆ ಮಾರಲ್ ಕರೇಜ್‌ನ್ನು ಕೊಟ್ಟಿದ್ದಾರೆ. ಅವರು ಇದರಲ್ಲೆಲ್ಲಾ ಪಾರ್ಟಿ, ಪಂಗಡ, ಅಧಿಕಾರ, ಅವರು ಯಾರನ್ನೋ ರಕ್ಷಣೆ ಮಾಡುವುದಕ್ಕೆ ಹೋಗುತ್ತಾರೆ ಎಂದು ನಾನು ಅನುಮಾನಪಡುವ ವ್ಯಕ್ತಿಯಲ್ಲ. As an individual, our Chief Minister is a person of very high stature. ಅವರು ಬಹಳ ದೊಡ್ಡ ನಾಯಕರು ಎಂದು ಹೇಳುವುದಕ್ಕೆ ನಾನು ಹೊಗಳುವುದಕ್ಕೆ ತಯಾರಾಗಿಲ್ಲ. ಆದರೆ ಒಬ್ಬ ಮನುಷ್ಯನಾಗಿ, ಒಬ್ಬ ವ್ಯಕ್ತಿಯಾಗಿ, ಇನ್ನೊಬ್ಬ ವ್ಯಕ್ತಿಯ ಜೊತೆಗೆ ನನ್ನ ವ್ಯವಹಾರವನ್ನು ನಡೆಸುವಾಗ ಅತ್ಯಂತ ದೊಡ್ಡ ಹೃದಯ ಇರತಕ್ಕಂಥ ವ್ಯಕ್ತಿ. ಇವತ್ತು ಅಧಿಕಾರ ಕೂಡ ಅವರ ಕೈಯಲ್ಲಿದೆ. He has to exhibit his mettle today. He has to display the humanitarian aspect of his personal display in this House. ಮಾನ್ಯ ಜೀವರಾಜ್ ಮನೆಯವರ ಗತಿ ಏನಾಗಿರಬೇಕು? ಒಂದು ಹೋರಾಟವನ್ನು ಮಾಡುವುದಕ್ಕೆ ಹೋದವನಿಗೆ ಲಾಕಪ್‌ನಲ್ಲಿ ಹಾಕಿದರೆ ಹೇಗೆ? ಏನು ಸ್ಮಗ್ಲಿಂಗೋ, ಕಳ್ಳತನವೋ ಇನ್ನೇನೋ ಆದರೆ ಪರವಾಗಿಲ್ಲ. ನಾವೆಲ್ಲಾ politicalisation ಗೆ... ಹೋಗತಕ್ಕವರು. ಇದು ನನಗೆ ಅನಿಸುತ್ತದೆ ಅಧ್ಯಕ್ಷರೇ, ತಾವು ದಯಮಾಡಿ ದೊಡ್ಡ ಮನಸ್ಸು ಮಾಡಬೇಕು. You should take it up directly for discussion. ಕಮಿಟಿಗೆ ರೆಫರ್ ಮಾಡತಕ್ಕಂಥದ್ದು, I am sorry, I had to take your time.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಇನ್ನೇನು ಬಹಳ ಉಳಿದಿಲ್ಲ. ಈ ಸರ್ಕಾರ ಈ ವಿಷಯವನ್ನು ದತ್ತಜಯಂತಿ ಅದರ ಪರಿಣಾಮಗಳ ದೃಷ್ಟಿಯಲ್ಲಿ ನೋಡಬಾರದು ಎಂದು ನನ್ನ ಬಿನ್ನಹ. ಏಕೆಂದರೆ ನಾನೂ ಕೂಡ ಆ ಪಕ್ಷಕ್ಕೆ ಸೇರಿದವನಲ್ಲ. ನನಗೆ ನನ್ನದೇ ಆದ ಪಕ್ಷ ಇದೆ. ನಮ್ಮದು ಬೇರೆ ನಿಲುವಿದೆ. ಅಲ್ಲಿ ನಡೆಯಬಾರದು ಅದು. ಸರ್ಕಾರ ಒಂದು ಕಾರ್ಯಕ್ರಮವನ್ನು ಅವರು ರದ್ದುಮಾಡಿದಾಗ ಕಾನೂನುಬಾಹಿರ ಮತ್ತೊಂದು ಮಗದೊಂದು ನಾನು ಅದನ್ನು ಒಪ್ಪುತ್ತೇನೆ. ಆದರೆ ಏನೂ ನಡೆಯುವುದಕ್ಕೆ ಮೊದಲೇ ಅವರು ಹೀಗೆ ಮಾಡುತ್ತಾರೆ, ಹಾಗೆ ಮಾಡುತ್ತಾರೆ ಎಂದು ತಿಳಿದುಕೊಂಡು ಒಬ್ಬ ಶಾಸಕರ ಮೇರೆ ತೆಗೆದುಕೊಂಡಿರುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಆ ದೃಷ್ಟಿಯಲ್ಲಿ ನೋಡಬಾರದು ಒಂದು. ಎರಡನೆಯದು, ಸಾರ್ವಜನಿಕ ದೃಷ್ಟಿಯಲ್ಲಿ ಶಾಸಕರದ್ದು ಯಾರಾದರೂ ಗೌರವ ಹೋಗುತ್ತದೆ ಎಂದು ಹೇಳಿ ಆರಂಭವಾದರೆ ನಾಳೆ ಮಂತ್ರಿಗಳದ್ದೂ ಹೋಗುತ್ತದೆ. ಇನ್ನೊಬ್ಬರದ್ದೂ ಹೋಗುತ್ತದೆಂದು ಹೇಳಿ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ಮನೆ ಎಲ್ಲರಿಗೂ ಸೇರಿದ್ದು ಅಧ್ಯಕ್ಷರೇ. ಇದರ ಗೌರವವನ್ನು ನಾವೆಲ್ಲಾ ಸೇರಿ ಉಳಿಸಬೇಕಾಗಿದೆ. ಇದನ್ನು ಜಾಸ್ತಿ ಮಾಡಬೇಕಾಗಿದೆ. ಅಕಸ್ಮಾತ್ ಸಣ್ಣಪುಟ್ಟ ತಪ್ಪುಗಳನ್ನು ಫೀಲ್ಡ್‌ನಲ್ಲಿ ಹೊರಗಡೆ ಹೊಸದಾಗಿ ಬಂದವರು ಅಥವಾ ಆವೇಶಗಳಲ್ಲಿ ನಾವು ಮಾಡಬಹುದು. ನೀವು ಕರೆದು ನಮ್ಮನ್ನು ಛೀಮಾರಿ ಮಾಡಿ. ಏನ್ರೀ? ಶಾಸಕರುಗಳಾಗಿ ಹೀಗೆ ವರ್ತಿಸುತ್ತೀರಿ

ಎಂದು ಹೇಳಿ. ಅದನ್ನು ಬಿಟ್ಟು ಪೊಲೀಸರ ಕೈಗೊಂಬೆಗಳನ್ನಾಗಿ ಶಾಸಕರನ್ನು ಬಿಡುವುದು ಯಾರಿಗೂ ಗೌರವ ತರುವಂಥ ವಿಷಯವಲ್ಲ. ಎರಡನೆಯದು, ಅಧಿಕಾರಿಗಳಿಗೆ ಸ್ವಲ್ಪ ಭಯವಿರಬೇಕು. ಅವರಿಗೆ, he has every right. ನಾನು ನಿಮಗೆ ಹೇಳಿದೆ, defamation ಕೇಸನ್ನು ಹಾಕಲಿಕ್ಕೆ ಅವರಿಗೆ ಅಧಿಕಾರ ಇಲ್ಲವೆಂದು ನಾನು ಹೇಳುವುದಿಲ್ಲ. ಅದಕ್ಕೆ ಮೊದಲೇ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು, and he has to prove, was he there as a rightful duty officer ಎಂದು ಇವರನ್ನು ಕರೆದಿದ್ದು ಯಾರು? ಇವರು ಯಾರ behalf of ಅಲ್ಲಿಗೆ ಹೋಗಿ ಕೆಲಸವನ್ನು ಮಾಡುತ್ತಿದ್ದರು? ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಏನು ಮಾಡುತ್ತಿದ್ದ? ಸರ್ಕಲ್ ಇನ್ಸ್‌ಪೆಕ್ಟರ್ ಏನಾಗಿದ್ದ? ಇದೆಲ್ಲಾ ವಿಚಾರಣೆಯಾಗಬೇಕಾಗುತ್ತದೆ. ಯಾವುದೋ ಸೇಡು ಇಟ್ಟುಕೊಂಡು ನೀವು ಕ್ಲಬ್ ನಡೆಸುತ್ತಿರುವುದರಿಂದ ನಿಮಗೆ ಮಾಮೂಲಿ ಬರುತ್ತಿರಬಹುದು ಎಂದು ಅವರು ಪಟ್ಟ ಒಂದು ಅನುಮಾನವನ್ನೇ ಇವತ್ತು ದೊಡ್ಡದು ಮಾಡಿಕೊಂಡು ಒಬ್ಬ ಶಾಸಕರ ಮೇಲೆ ಹೀಗೆ ಹರಿಹಾಯುವುದಕ್ಕೆ ಶುರು ಮಾಡಿದರೆ ಇದು ಕ್ಷಮಿಸಲಾರದ ಘಟನೆ ಎಂದು ಹೇಳಿ ಈ ಬಗ್ಗೆ ತಾವು ಶಿಸ್ತು ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವಾಗ ಕರ್ನಾಟಕ ರಾಜ್ಯದ ಲಾ ಅಂಡ್ ಆರ್ಡರ್ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಇದೆ. ಇವತ್ತು ವಿರೋಧ ಪಕ್ಷದ ನಾಯಕರು specific ಆಗಿ ಮಾನ್ಯ ಜೀವರಾಜ್ ಅವರನ್ನು ಡಿವೈಎಸ್‌ಪಿ ಹಿಡಿದು ಅವಮಾನ ಮಾಡಿ ಅಲ್ಲಿ ಕೇಸನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಹೇಳುತ್ತೇನೆ, ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸುವಾಗ ಲಾ ಅಂಡ್ ಆರ್ಡರ್ ಬಗ್ಗೆ ಎಲ್ಲೆಲ್ಲಿ ಈ ತರಹದ ಪೊಲೀಸ್ ದೌರ್ಜನ್ಯ ನಡೆಯುತ್ತಿದೆ, ಅದರ ಬಗ್ಗೆ ತಾವು ಹೇಳುವುದಕ್ಕೆ ಅವಕಾಶ ಇದೆ. ತಾವು (ವಾಟಾಳ್ ನಾಗರಾಜ್‌ರವರನ್ನು ಉದ್ದೇಶಿಸಿ) ಮಾತನಾಡಲಿಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಟ್ಟರೆ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ನನ್ನ ಸಹಿ ಇದೆ.

ಶ್ರೀ ಧರ್ಮಸಿಂಗ್ : ತಾವು ಸಹಿಯನ್ನು ಹಾಕಿಯೇ ಬಿಟ್ಟಿದ್ದೀರಾ?

ನಗು

ಶ್ರೀ ಜೆ.ಸಿ. ಮಾಧುಸ್ವಾಮಿ : ತಮ್ಮನ್ನು ಕೇಳದೆ ಇವರು ಸಹಿಯನ್ನು ಹಾಕಬಹುದಾ ಸಾರ್? ಇದೊಂದು ದೊಡ್ಡ ಪ್ರಿವಿಲೇಜ್.

ನಗು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನೋಡಿ, ಏನೋ ನೀವು ಒಂದು ವಿಶ್ವಾಸಕ್ಕೆ ಪ್ರೀತಿಗೆ ಹೇಳಿದರೆ ಅದನ್ನು ಇಲ್ಲಿ ದೊಡ್ಡದು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ಪ್ರಾಮುಖ್ಯವಾಗಿರುವುದು

ಅಂದರೆ ಡಿವೈಎಸ್‌ಪಿಗೆ ಶಾಸಕರನ್ನು ಬಂಧಿಸಿ ಕರೆದುಕೊಂಡು ಹೋಗುವುದಕ್ಕೆ ಅಧಿಕಾರವಿಲ್ಲ. ನಾನು ಹೇಳತಕ್ಕಂಥದ್ದು ಏನೆಂದರೆ, ಮತ್ತೆ ಅವರೇ ಹೋಗಿ ಅಲ್ಲಿ ಸೆಕ್ಷನ್ 143, 144, 147, 148, 332, 353 ಇದು ಇಂಡಿಯನ್ ಪೀನಲ್ ಕೋಡ್‌ನಲ್ಲಿದೆ; ಅದನ್ನು ಹಾಕುತ್ತಾರೆ. ಅವರು ಯಾರನ್ನು ಬಂಧನ ಮಾಡಿದರೂ ಅವರ ಮೇಲೆ ಹತ್ತು-ಹನ್ನೆರಡು ಕೇಸ್‌ಗಳನ್ನು ಹಾಕತಕ್ಕಂಥದ್ದು ಇದೆ. ಇದಾದಮೇಲೆ ಮಾನ್ಯ ಜೀವರಾಜ್ ಅವರನ್ನು ಬಂಧನ ಮಾಡಿದ ಮೇಲೆ ಅವರನ್ನು ಲಾಕಪ್‌ನಲ್ಲಿ ಇಟ್ಟಮೇಲೆ ಒಂದು ಗಂಟೆಯ ನಂತರ ಸರ್ಕಲ್ ಇನ್ಸ್‌ಪೆಕ್ಟರ್ ನೇರವಾಗಿ ಹೇಳುತ್ತಾರೆ, ಈ ಬಂಧನ ಸರಿ ಇಲ್ಲ ಅದು ನನ್ನ ಸಟೇಷನ್‌ನಲ್ಲಿ ಲಾಕಪ್‌ನಲ್ಲಿ ಇಟ್ಟಿರತಕ್ಕಂಥದ್ದು. ಇದು ಸರಿಯಾದ ನೀತಿಯಲ್ಲ ಎಂದು ತಕ್ಷಣವೇ ಬಿಡುಗಡೆ ಮಾಡುತ್ತಾರೆ. ಇವೆರಡೇ ಸಾಕು. ಡಿವೈಎಸ್‌ಪಿ ಅವರು ವೈಯಕ್ತಿಕವಾಗಿ ದ್ವೇಷದಿಂದ ಮಾನ್ಯ ಜೀವರಾಜ್ ಅವರನ್ನು ಬಂಧನ ಮಾಡಿರತಕ್ಕದ್ದು ಸರ್ಕಲ್ ಇನ್ಸ್‌ಪೆಕ್ಟರ್‌ಗೂ ಗೊತ್ತಿಲ್ಲದೆ, ಸಬ್ ಇನ್ಸ್‌ಪೆಕ್ಟ್‌ಗೂ ಗೊತ್ತಿಲ್ಲದೆ ಯಾರಿಗೂ ಗೊತ್ತಿಲ್ಲದೇ ಬಹಳ ದುರುದ್ದೇಶಪೂರ್ವಕವಾಗಿ, ಅಲ್ಲಿ ಭಾಷಣವನ್ನು ಮಾಡುವ ಅವಕಾಶವನ್ನು ತಪ್ಪಿಸಿ ನೇರವಾಗಿ ತೆಗೆದುಕೊಂಡು ಹೋಗುತ್ತಾರೆ. ನಾನು ಬಹಳ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಸರ್ಕಲ್ ಇನ್ಸ್‌ಪೆಕ್ಟರ್ ಕರೆಕ್ಟ್ ಇದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಏನು ಹೇಳುತ್ತಾರೆ? ನನ್ನ ಸ್ಟೇಷನ್‌ನಲ್ಲಿ ಬಂಧನ ಮಾಡಿರತಕ್ಕದ್ದು ಸರಿಯಲ್ಲ. ಅದು ಅಲ್ಲಿಗೆ. ತಕ್ಷಣ ಮುಗಿದು ಹೋಯಿತು. ಡಿವೈಎಸ್‌ಪಿ ಅವರು ಮಾಡಿರತಕ್ಕದ್ದು ನೇರವಾಗಿ ತಪ್ಪಾಗಿದೆ ಎನ್ನತಕ್ಕದ್ದು. ಮತ್ತು ಅವರು 25 ಲಕ್ಷ ರೂಪಾಯಿಗಳ ಮಾನ ನಷ್ಟ ಮೊಕದ್ದಮೆ ಹೂಡುತ್ತೇನೆ ಎನ್ನುತ್ತಾರೆ. ನನಗೆ ಅನ್ನಿಸುತ್ತದೆ. ಶಾಸಕರ ಮೇಲಾಗಲಿ, ಮಂತ್ರಿಗಳ ಮೇಲಾಗಲಿ, ಯಾರೊಬ್ಬ ಸಾರ್ವಜನಿಕ ವ್ಯಕ್ತಿಯ ಮೇಲೆ ಸರ್ಕಾರಿ ನೌಕರ ಯಾವುದೇ ಒಂದು ಮೊಕದ್ದಮೆ ಹೂಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕು. ಮುಖ್ಯ ಕಾರ್ಯದರ್ಶಿಯವರ ಅನುಮತಿಯನ್ನು ಪಡೆಯಬೇಕು. ಇಲ್ಲಿ ಅನುಮತಿ ಪಡೆದಿಲ್ಲ. ನೇರವಾಗಿ ಅವರ ವಕೀಲರ ಮೂಲಕ ನೋಟೀಸನ್ನು ಜಾರಿ ಮಾಡುತ್ತಾರೆ. ಅವರು ಏನು ಹೇಳುತ್ತಾರೆ? ಡಿವೈಎಸ್‌ಪಿ ಸತ್ಯ ಹರಿಶ್ಚಂದ್ರ. ಸತ್ಯಹರಿಶ್ಚಂದ್ರನನ್ನು ಬಿಟ್ಟರೆ ಡಿವೈಎಸ್‌ಪಿ ಅವರೇ ಸತ್ಯ ಹರಿಶ್ಚಂದ್ರ. ತಾವು ಜೀವನದಲ್ಲಿ ಹಣ ಮುಟ್ಟಿಲ್ಲ, ಲಂಚ ಪಡೆದಿಲ್ಲ, ಬಹಳ ಪ್ರಾಮಾಣಿಕ. ಅತ್ಯಂತ ಪ್ರಾಮಾಣಿಕ. ನಮ್ಮ ಕಕ್ಷಿದಾರ ಅತ್ಯಂತ ಪ್ರಾಮಾಣಿಕ, ಅತ್ಯಂತ ಪ್ರಾಮಾಣಿಕನ ಮೇಲೆ ಶಾಸಕರು ಈ ರೀತಿ ಹೇಳಬಹುದೇ? ಒಂದು ಲಕ್ಷ ರೂಪಾಯಿ ಲಂಚವನ್ನು ಕ್ಲಬ್‌ಗಳಲ್ಲಿ ಪ್ರತಿದಿನ ತೆಗೆದುಕೊಳ್ಳುತ್ತಾರೆ. ಇವೆಲ್ಲಾ ಹೇಳಬಹುದೇ? ಎಲ್ಲಾದರೂ ಉಂಟೇ? ಒಬ್ಬ ಹರಿಶ್ಚಂದ್ರನ ಮೇಲೆ, ಅದೂ ಬಹಳ ಸತ್ಯ ಹರಿಶ್ಚಂದ್ರ! ಅವನ ಮೇಲೆ ಎಲ್ಲಾದರೂ ಹೇಳಬಹುದಾ? ಇದು ಸರಿಯಾದುದು ಅಲ್ಲ. ಅವರ ವಕೀಲರು ಹೇಳತಕ್ಕದ್ದು ಸರಿಯಾದುದು ಅಲ್ಲ. ಜೊತೆಗೆ ಅವರಿಗೆ ಮಾನಸಿಕವಾಗಿ ನೋವಾಗಿದೆ ಎಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಹರಿಶ್ಚಂದ್ರ ಎಂದು ಹೇಳಿ ಪದೇ ಪದೇ ಹರಿಶ್ಚಂದ್ರನ ಬಗ್ಗೆ ಹೇಳುವುದು ಅಷ್ಟು ಸೂಕ್ತವಲ್ಲ. ಏಕೆಂದರೆ ಹರಿಶ್ಚಂದ್ರ ಮೊದಲು ಸುಳ್ಳನ್ನೇ ಹೇಳಿದ್ದ. ಅವನು ಸತ್ಯ ಹರಿಶ್ಚಂದ್ರ ಅಲ್ಲ. ಏಕೆಂದರೆ ಮಹಾಭಾರತದ ಪುರಾಣದಲ್ಲಿ ಹರಿಶ್ಚಂದ್ರ ತಾನು ಪುತ್ರಕಾಮೇಷ್ಠಿ ಯಜ್ಞವನ್ನು ಮಾಡಿ ಮಗನನ್ನು ಪಡೆದ. ಆಗ ಆಗ್ನಿ ದೇವರು ನಿನ್ನ ಮಗ ಪ್ರಾಪ್ತ ವಯಸ್ಸಿಗೆ ಬಂದ ತಕ್ಷಣವೇ ನೀನು ಆತನನ್ನು ಬಲಿ ಕೊಡಬೇಕು; ಹವಿಸ್ಸಿಗೆ ಅರ್ಪಿಸಬೇಕು ಎಂದು ಹೇಳಿದರು. ಹರಿಶ್ಚಂದ್ರನಿಗೆ ಪುತ್ರ ವ್ಯಾಮೋಹ ಬೆಳೆದಿದ್ದರಿಂದ ಮಗನನ್ನು ಕೊಡದೇ ಪುನಶೇಪ ಎಂಬ ಒಬ್ಬ ಬಡ ಬ್ರಾಹ್ಮಣನ ಮಗನನ್ನು ಆಗ್ನಿಗೆ ಹವಿಸು ಕೊಡುತ್ತಾನೆ. ಆದ್ದರಿಂದ ಹರಿಶ್ಚಂದ್ರ ಸತ್ಯ ಹೇಳಿದವನು ಅಲ್ಲ. ಮೊದಲೇ ಸುಳ್ಳು ಹೇಳಿದವನು. ಆದ್ದರಿಂದ ತಾವು ಅದನ್ನು ಹೇಳಬಾರದು ಎಂದು ಅಷ್ಟೇ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿರುವುದು ಬರೇ ಹರಿಶ್ಚಂದ್ರನ ವಿಷಯ ಅಲ್ಲ. ಸತ್ಯ ಹರಿಶ್ಚಂದ್ರನ ವಿಷಯವನ್ನು ಹೇಳುತ್ತಿದ್ದೇನೆ. ಯಾವಾಗ ಸತ್ಯ ಹರಿಶ್ಚಂದ್ರ ಆಗುತ್ತಾನೆ. ಕೊನೆಯವರೆಗೂ ಎಷ್ಟೇ ಕಷ್ಟವನ್ನು ವಿಶ್ವಾಮಿತ್ರ ಕೊಟ್ಟಾಗಲೂ, ಎಷ್ಟೇ ತೊಂದರೆ ಕೊಟ್ಟಾಗಲೂ ಎಲ್ಲಿಗೆ ಹೋಗುತ್ತಾನೆ ಸತ್ಯ ಹರಿಶ್ಚಂದ್ರ? ತನ್ನ ಧರ್ಮ ಪತ್ನಿಯನ್ನೇ ಹರಾಜಿಗೆ ಇಡುತ್ತಾನೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಹೇಳುವುದು. ಸತ್ಯ ಹರಿಶ್ಚಂದ್ರ ಎಂದು ಹೇಳತಕ್ಕದ್ದು ತಮಗೆ ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ತನ್ನ ಧರ್ಮ ಪತ್ನಿಯನ್ನೇ ಬಹಿರಂಗವಾಗಿ ಹರಾಜಿಗೆ ಇಟ್ಟಂತಹ ಇತಿಹಾಸ ಇದೆ. ಅದು ಸತ್ಯ ಹರಿಶ್ಚಂದ್ರನ ಕಥೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಬರುತ್ತದೆ. ಇಲ್ಲದಿದ್ದರೆ ಬರೇ ಹರಿಶ್ಚಂದ್ರನಾಗಿ ಉಳಿಯುತ್ತಿದ್ದ. ಇಲ್ಲಿ ಆ ಸತ್ಯಹರಿಶ್ಚಂದ್ರವನ್ನು ಡಿವೈಎಸ್‌ಪಿ ತಾನು ಹೋಲಿಕೆ ಮಾಡಿಕೊಂಡು, ಅಧ್ಯಕ್ಷರೇ 25 ಲಕ್ಷ ರೂಪಾಯಿಗಳನ್ನು ಕೇಳುತ್ತಾನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿರುವುದು ಬರೇ ಹರಿಶ್ಚಂದ್ರನ ವಿಷಯ ಅಲ್ಲ. ಸತ್ಯ ಹರಿಶ್ಚಂದ್ರನ ವಿಷಯವನ್ನು ಹೇಳುತ್ತಿದ್ದೇನೆ. ಯಾವಾಗ ಸತ್ಯ ಹರಿಶ್ಚಂದ್ರ ಆಗುತ್ತಾನೆ. ಕೊನೆಯವರೆಗೂ ಎಷ್ಟೇ ಕಷ್ಟವನ್ನು ವಿಶ್ವಾಮಿತ್ರ ಕೊಟ್ಟಾಗಲೂ, ಎಷ್ಟೇ ತೊಂದರೆ ಕೊಟ್ಟಾಗಲೂ ಎಲ್ಲಿಗೆ ಹೋಗುತ್ತಾನೆ ಸತ್ಯ ಹರಿಶ್ಚಂದ್ರ? ತನ್ನ ಧರ್ಮ ಪತ್ನಿಯನ್ನೇ ಹರಾಜಿಗೆ ಇಡುತ್ತಾನೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಹೇಳುವುದು. ಸತ್ಯ ಹರಿಶ್ಚಂದ್ರ ಎಂದು ಹೇಳತಕ್ಕದ್ದು ತಮಗೆ ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ತನ್ನ ಧರ್ಮ ಪತ್ನಿಯನ್ನೇ ಬಹಿರಂಗವಾಗಿ ಹರಾಜಿಗೆ ಇಟ್ಟಂತಹ ಇತಿಹಾಸ ಇದೆ. ಅದು ಸತ್ಯ ಹರಿಶ್ಚಂದ್ರನ ಕಥೆ. ಅದಕ್ಕೇ ಸತ್ಯ ಹರಿಶ್ಚಂದ್ರ ಎಂದು ಬರುತ್ತದೆ. ಇಲ್ಲದಿದ್ದರೆ ಬರೇ ಹರಿಶ್ಚಂದ್ರನಾಗಿ ಉಳಿಯುತ್ತಿದ್ದ. ಇಲ್ಲಿ ಆ ಸತ್ಯಹರಿಶ್ಚಂದ್ರನನ್ನು ಡಿವೈಎಸ್‌ಪಿ ತಾನು ಹೋಲಿಕೆ ಮಾಡಿಕೊಂಡು, ಅಧ್ಯಕ್ಷರೇ, 25 ಲಕ್ಷ ರೂಪಾಯಿಗಳನ್ನು ಕೇಳುತ್ತಾನೆ. ಅಂದರೆ

25 ಲಕ್ಷ ರೂಪಾಯಿಗಳನ್ನು ಕೊಟ್ಟುಬಿಟ್ಟರೆ ಅವನ ಮಾನ ಮರ್ಯಾದೆ ಹೋಗಿರುವುದೆಲ್ಲಾ ಬರುತ್ತದೆ. 25 ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಟ್ಟರೆ ಅವನ ಮಾನ, ಮರ್ಯಾದೆ ಹೋಗಿರತಕ್ಕದ್ದು ಬರುವುದು ಮತ್ತು ಅವನು ತಿಂಗಳಿಗೆ ಒಂದು ಲಕ್ಷ ರೂಪಾಯಿ ವಸೂಲು ಮಾಡುವುದು ಕ್ಲಬ್‌ಗಳಲ್ಲಿ, ಇವೆಲ್ಲಾ ಹೋಗುತ್ತದೆ. 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ, ಅಂದರೆ 25 ಲಕ್ಷ ರೂಪಾಯಿಗಳಿಗೆ ಮಾತ್ರ ಅವನ ಮಾನ, ಮರ್ಯಾದೆ. ಅವನ ರೇಟು ಎಷ್ಟಪ್ಪಾ ಎಂದರೆ, ಅವನ ಮಾನ, ಮರ್ಯಾದೆ, ರೇಟು ಎಷ್ಟಪ್ಪಾ ಎಂದರೆ 25 ಲಕ್ಷ ರೂಪಾಯಿ. ಮತ್ತು ಅವನ ಲಾಯರ್‌ಗೆ ಒಂದು ಸಾವಿರ ರೂಪಾಯಿ, ಇಷ್ಟು ಕೊಟ್ಟರೆ ಮಾನ, ಮರ್ಯಾದೆಯಲ್ಲಾ ಉಳಿಯಿತು. 25 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಮಾನ, ಮರ್ಯಾದೆ ಉಳಿಯುತ್ತದೆ. ಅಂದರೆ ನನಗೆ ಅನಿಸುತ್ತದೆ. ಮೊದಲನೆಯದಾಗಿ ಈ ಅಧಿಕಾರಿಯ ಬಗ್ಗೆ ಸಮಗ್ರವಾಗಿ ತನಿಖೆ ಆಗಲೇಬೇಕು. ಅಲ್ಲಿಯವರೆಗೆ ಈ ಅಧಿಕಾರಿಯನ್ನು ಈ ಕೂಡಲೇ ಅಮಾನತ್ತಿನಲ್ಲಿಡಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾದ ಕೆಲಸ, ಆ ಅಧಿಕಾರಿಯನ್ನು ತತ್‌ಕ್ಷಣ ಅಮಾನತ್ತಿನಲ್ಲಿಟ್ಟು ಸಮಗ್ರವಾದಂತಹ ತನಿಖೆ ಮಾಡಬೇಕು. ಈಗ ಮೊದಲು ಆಗಬೇಕಾದ ಕೆಲಸ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಕೆಲಸ ತುರ್ತಾಗಿ, ತತ್‌ಕ್ಷಣದಿಂದ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟಿದ್ದೇನೆ, ಮುಂದೆ ಅದರ ಬಗ್ಗೆ ತನಿಖೆ ಆಗಲಿ ಎನ್ನತಕ್ಕದ್ದು ಒಂದು. ನಮಗೆ ಅನಿಸುತ್ತದೆ. ಶಾಸಕರುಗಳ ಬಗ್ಗೆ ರಕ್ಷಣೆ ಕೊಡಬೇಕು. ಅನೇಕ ಕಡೆ ಹಿಂದೆ ಇತ್ತು. ಇದರ ಬಗ್ಗೆ ಸದನದಲ್ಲಿ ತೀರ್ಮಾನ ಆಗಬೇಕು. ಯಾರನ್ನೇ ಬಂಧನ ಮಾಡಬೇಕಾದರೆ ಅಧ್ಯಕ್ಷರ ಅನುಮತಿ ಪಡೆಯಬೇಕಾಗಿತ್ತು. ಮತ್ತು ಯಾರನ್ನೇ ಬಂಧನ ಮಾಡಿದ ಮೇಲೆ ಅಧ್ಯಕ್ಷರಿಗೆ ಇಂಥಿಂಥ ಒಂದು ಕಲಂನಲ್ಲಿ ಬಂಧನ ಮಾಡಿದ್ದೇವೆ ಎಂದು ಹೇಳಬೇಕಾಗಿತ್ತು. ಮತ್ತು ಯಾರನ್ನೇ ಬಂಧನ ಮಾಡಿದರೂ ಈ ಸದನದಲ್ಲಿ ಬಂಧನವಾದಂತಹ ಶಾಸಕರು ಇಂತಹ ಕಡೆ, ಇಂತಹ ಸೆಕ್ಷನ್‌ನಲ್ಲಿ ಬಂಧನವಾಗಿದ್ದಾರೆ ಎಂದು ಹೇಳತಕ್ಕದ್ದು ಪದ್ಧತಿ ಇದೆ. ನಾನು ಸುಮಾರು 1967ರಿಂದ ಬಂಧನಗೊಂಡಿದ್ದೇನೆ. ಸಾವಿರಾರು ಬಾರಿ ನನಗೆ ಬಂಧನವಾಗಿದೆ. ಇದೇ ಸದನದಲ್ಲಿ ನನ್ನ ಹೆಸರು ಅನೇಕ ಬಾರಿ ವ್ಯಾಖ್ಯಾನ ಆಗಿದೆ; ನನ್ನ ಹೆಸರು ಬಂದಿರತಕ್ಕದ್ದು ಇದೆ. ನಾವು ಅನೇಕ ಹೋರಾಟ ಮಾಡಬೇಕಾಗುತ್ತದೆ, ಚಳುವಳಿ ಮಾಡಬೇಕಾಗುತ್ತದೆ. ರಸ್ತೆಯಲ್ಲಿ ಬರಬೇಕಾಗುತ್ತದೆ. ನಮ್ಮ ಭಾಷಣ ಯಾವ ರೀತಿ ಇರಬೇಕು ಎಂದು ಹೇಳಿ ಪೊಲೀಸರು ನಮಗೆ ಬರೆದುಕೊಡಬೇಕಾಗಿಲ್ಲ. ಪೊಲೀಸ್‌ನವರು ಹೇಳಿದ ಹಾಗೆ ನಾವು ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಭಾಷಣ ತೀಕ್ಷ್ಣವಾಗಿರಬಹುದು. ಅನೇಕ ಸಾರಿ ಬೇರೆ ಬೇರೆ ದಿಕ್ಕನ್ನು ತಲುಪಿರಬಹುದು. ಆದರೆ ಇದನ್ನು ತಪ್ಪು ಎಂದು ಹೇಳಿ ಒಬ್ಬ ಅಧಿಕಾರಿ ನಮ್ಮ ಸಾರ್ವಜನಿಕ ಜೀವನದಲ್ಲಿ ನಮ್ಮ ಭಾಷಣವನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಮಾತನ್ನು ತಡೆಹಿಡಿಯತಕ್ಕಂಥ ಶಕ್ತಿ ಅವರಿಗೆ ಇಲ್ಲ ಆ ದೃಷ್ಟಿಯಿಂದ ನಮಗೆ ನಾನು ಹೇಳುತ್ತಿದ್ದೇನೆ. ಇಲ್ಲಿ ಸರ್ಕಲ್ [illegible]

ಅವರ ಒಂದೇ ಒಂದು ಮಾತು ಸಾಕು. ಸರ್ಕಲ್ ಇನ್ಸ್‌ಪೆಕ್ಟರ್ ಅವರು ಹೇಳಿರತಕ್ಕ ಒಂದೇ ಒಂದು ವಾಕ್ಯದಿಂದ ಆ ಡಿವೈಎಸ್‌ಪಿ ಅವರನ್ನು ಸಂಪೂರ್ಣವಾಗಿ ಈ ಕ್ಷಣದಿಂದ ಅಮಾನತ್ತು ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಇದರ ಜೊತೆಗೆ ಮಾನ್ಯ ರಮೇಶ್ ಕುಮಾರ್ ಅವರ ಬಗ್ಗೆ ನಮ್ಮ ಮಾನ್ಯ ಮಾಧುಸ್ವಾಮಿ ಅವರು ಮಾತನಾಡಿದರು ಇದಕ್ಕೂ ಅದಕ್ಕೂ ತಾಳೆ ಮಾಡುವುದು ಬೇಡ. ಅದಕ್ಕಾಗಿ ಬೇರೆ ದಿವಸ ಸಮಗ್ರವಾಗಿ ಅದರ ಬಗ್ಗೆ ಚರ್ಚೆ ಆಗಲೇಬೇಕು. ನಿಮ್ಮ ಶ್ರೀ ರಮೇಶ್ ಕುಮಾರ್‌ರವರನ್ನು ಉದ್ದೇಶಿಸಿ, ವಿಚಾರ ಸಮಗ್ರವಾಗಿ ತನಿಖೆ ಆಗಬೇಕು. ಒಂದು ಪಿತೂರಿ ಆಗಿದೆ. ಕೊಲೆ ಆಪಾದನೆಯಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು ಅದೇ ಕ್ಷೇತ್ರದಲ್ಲಿ ಸೇರಿಸಬೇಕಾದರೆ ಇದರ ಹಿಂದೆ ಒಂದು ದೊಡ್ಡ ಪಿತೂರಿ ನಡೆದಿದೆ. ಯಾವ ರೀತಿ ಪಿತೂರಿ ಆಯಿತು? ಹೇಗೆ ಆಯಿತು? ಯಾರು ಮಾಡಿದ್ದಾರೆ ಎನ್ನತಕ್ಕದ್ದನ್ನು ಸಮಗ್ರವಾಗಿ ಈ ಸದನದಲ್ಲಿ ಹೇಳಬೇಕಾಗುತ್ತದೆ. ಈ ಸದನದಲ್ಲಿ ಅದು ಚರ್ಚೆ ಆಗಲೇಬೇಕು ಎಂದು ಹೇಳುತ್ತೇನೆ. ಸವಿಸ್ತಾರವಾಗಿ, ಸಮಗ್ರವಾಗಿ ಚರ್ಚೆ ಆಗಬೇಕು. ಯಾವಾಗ ಅವರು ಕೇಸು ಹಾಕಿದರು? ಯಾವಾಗ ಇವರು ಅದರಲ್ಲಿ ಸೇರಿದ್ದರು? ಈ ಕೊಲೆ ಆಪಾದನೆಯಲ್ಲಿ ಇವರನ್ನು ಸೇರಿಸಿದ ಉದ್ದೇಶ ಏನು? ಯಾವ ಕಾರಣಕ್ಕೋಸ್ಕರವಾಗಿ? ಏನೂ ಇಲ್ಲದೇ ನೇರವಾಗಿ ನ್ಯಾಯಾಲಯ ತತ್‌ಕ್ಷಣ ಅವರು ನ್ಯಾಯಾಲಯಕ್ಕೆ ಬರಬೇಕು ಎಂದು ಹೇಳತಕ್ಕದ್ದು...

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಪ್ರಚಾರಕ್ಕೆ ಯಾವಾಗ ಬರುವುದು ಎಂದರೆ ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದೆ. ಚುನಾವಣೆಗೆ ಅಲ್ಲಿಂದ ಸ್ಪರ್ಧಿಸಬೇಕು ಎಂದು ಹೇಳಿ ಕಾಂಗ್ರೆಸ್ ಪಕ್ಷದ ಟಿಕೇಟ್ ಗೆ ಆಕಾಂಕ್ಷಿ ಆಗಿದ್ದೆ. ಆ ಟಿಕೇಟ್ ಹಂಚಿಕೆ ವೇಳೆಗೆ ಪೇಪರ್‌ನಲ್ಲಿ, ಟಿವಿಯಲ್ಲಿ ಪ್ರಚಾರ ಬರುತ್ತದೆ. ನಾನು ಕೊಲೆ ಆಪಾದನೆಯಲ್ಲಿ ಸಂಬಂಧ ಇದ್ದೇನೆ ಎಂದು ಬರುತ್ತದೆ. ಆಮೇಲೆ ಹೋಗಿ ಬಿಡುತ್ತದೆ. ಪುನ: ಈ ಮಂತ್ರಿಮಂಡಲದ ವಿಸ್ತರಣೆ ಬಂತಲ್ಲಾ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ನನಗೂ ಅದಕ್ಕೂ ಸಂಬಂಧ ಇಲ್ಲ, ನನಗೆ ಆಗಿ ಬರುವುದಿಲ್ಲ. ನಾನು ಹೊರಗೇ ಇರುತ್ತೇನೆಂದರೂ ಸಹ ಯಾರಿಗೋ ಅನುಮಾನ. ಮತ್ತೆ ಆ ಟೈಮಿಗೇ ಬರುತ್ತದೆ. ಇದು ಸಮಯ ನೋಡಿ ಆ ಆಪಾದನೆ ಪ್ರಚಾರಕ್ಕೆ ಬರುತ್ತದೆ. ಬೇರೆ ಟೈಮಿನಲ್ಲಿ ಆ ಪ್ರಚಾರ ಇರುವುದಿಲ್ಲ. ಅದರ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಸಮಗ್ರವಾಗಿ ಅದರ ಬಗ್ಗೆ ಚರ್ಚೆ ಆಗಬೇಕಾಗತ್ತದೆ. ತಮಗೆ ಹೇಳಿಯೇ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇನ್ನೊಂದು ಮೋಷನ್ ತರಿಸಿ.

ಶ್ರೀ ವಾಟಾಳ್ ನಾಗರಾಜ್ : ಬೇರೆ ಸಂದರ್ಭ ಉಪಯೋಗಿಸಿಕೊಂಡು ತಾವು ಅವಕಾಶ ಕೊಡಬೇಕಾಗುತ್ತದೆ. ಸಮಗ್ರ ಚರ್ಚೆ ಆಗಲಿ. ಈಗ ನಾನು

ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈಗ ನಿಜಕ್ಕೂ ಈ ಸದನದಲ್ಲಿ ಒಬ್ಬ ಸದಸ್ಯರಿಗೆ ಆಗಿರತಕ್ಕ ಅತ್ಯಂತ ಅಗೌರವ ಮತ್ತು ನೋವು ಆಗಿರುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರುತ್ತೇನೆ. ತತ್‌ಕ್ಷಣ ಅವರು ಕೊಡುವ ಉತ್ತರದಲ್ಲಿ ಆ ಡಿವೈಎಸ್‌ಪಿ ಅವರನ್ನು ಅಮಾನತ್ತು ಮಾಡಿದ್ದೇವೆ ಎನ್ನತಕ್ಕ ಮಾತನ್ನು ಅವರು ಹೇಳಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ದತ್ತ ಪೀಠದ ವಿಚಾರದಲ್ಲಿ ನನಗೂ ಬಿಜೆಪಿಯವರಿಗೂ ಮೂಲಭೂತವಾದಂತಹ ವ್ಯತ್ಯಾಸ ಇದೆ. ಆದರೆ ಆ ವಿಚಾರ ಬೇರೆ. ಒಬ್ಬ ಶಾಸಕರಿಗೆ ಪೊಲೀಸ್ ಆಫೀಸರ್ ಅವರು ಅವರ ಜೊತೆ ವರ್ತನೆ ಮಾಡಿರತಕ್ಕಂಥ ವಿಚಾರದಲ್ಲಿ ಯಾರೂ ಒಪ್ಪಲಿಕ್ಕೆ ಸಾಧ್ಯವಿಲ್ಲ. ಮತ್ತೇ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹೋರಾಟ ಮಾಡತಕ್ಕಂಥ ಪ್ರತಿ ಸಂದರ್ಭದಲ್ಲೂ ಸೆಕ್ಷನ್ 143, 144, 150 ಹಾಕುತ್ತಾರೆ. ಅದನ್ನು ಹಾಕಿದಾಗ, ಹಾಕಿದ್ದಾರೆ ಎಂದು ಹೇಳಿ ನಾವ್ಯಾರೂ ನಮ್ಮ ಹಕ್ಕುಗಳನ್ನು ಚಲಾವಣೆ ಮಾಡದೇ ಇರಲಿಕ್ಕೆ ಸಾಧ್ಯ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದತ್ತವಾಗಿ ಕೊಟ್ಟಿರತಕ್ಕಂಥ ಹಕ್ಕು ಪ್ರತಿಭಟನೆ ಮಾಡತಕ್ಕಂಥ ಹಕ್ಕು. ಆ ಪ್ರತಿಭಟನೆ ಹಕ್ಕನ್ನು ಮೊಟಕುಗೊಳಿಸತಕ್ಕಂಥ ಅಧಿಕಾರವನ್ನು ದಯವಿಟ್ಟು ಪೊಲೀಸ್ ಅಧಿಕಾರಿಗಳಿಗೆ ವರ್ಗಾಯಿಸಬೇಡಿ. ಅದೇ ಈ ರಾಜ್ಯದಲ್ಲಿ ಆಗಿರತಕ್ಕಂಥದ್ದು. ಬಹಳ ಪ್ರಮುಖವಾಗಿ ಆಗಿರತಕ್ಕದ್ದು ಏನೆಂದರೆ ಸಂವಿಧಾನ ದತ್ತವಾದಂತಹ ಹಕ್ಕನ್ನು ನಿರಾಕರಣೆ ಮಾಡಲಿಕ್ಕೆ ಪೊಲೀಸ್‌ನವರನ್ನು ಉಪಯೋಗಿಸತಕ್ಕದ್ದು ಏನು ಇದೆ ಇದೊಂದು ದುರಂತ. ಕಾರ್ಮಿಕರು ಹೋರಾಟ ಮಾಡಿದರೂ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡುತ್ತಾರೆ. ಜನ ಹೋರಾಟ ಮಾಡಿದರೂ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡುತ್ತಾರೆ. ಶಾಸಕರು ಹೋರಾಟ ಮಾಡಿದರೂ ಪೋಲೀಸ್‌ನವರು ಮಧ್ಯ ಪರವೇಶ ಮಾಡುತ್ತಾರೆ. ಪೊಲೀಸ್‌ನವರು ಇರತಕ್ಕದ್ದು ಕಾನೂನನ್ನು ಏನಾದರೂ ನಾವು ನಮ್ಮ ಕೈಗೆ ತೆಗೆದುಕೊಂಡರೆ, ನಮ್ಮ ಮೇಲೆ ಬೇಕಾದರೆ ಕ್ರಮ ತೆಗೆದುಕೊಳ್ಳಲಿ. ಆದರೆ ಕಾನೂನು ಬದ್ಧವಾಗಿ ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡಲಿಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ನಿಯಂತ್ರಣ ಮಾಡತಕ್ಕಂಥ ಪೊಲೀಸ್‌ನವರಿಗೆ ಕೊಟ್ಟಿರತಕ್ಕಂಥಹದ್ದು ಇದೊಂದು ದುರಂತ. ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ ಪ್ರಧಾನ ಮಂತ್ರಿ, ರಾಷ್ಟ್ರಪತಿ ಅವರೂ ಸಹ ಒಬ್ಬ ಮನುಷ್ಯನನ್ನು ಅರೆಸ್ಟ್ ಮಾಡುವ ಹಕ್ಕು ಇಲ್ಲ. ಆದರೆ ಈ ದೇಶದಲ್ಲಿ ಒಬ್ಬ ಆರ್ಡಿನರಿ ಪೊಲೀಸಿನವರಿಗೆ ಆ ಅಧಿಕಾರ ಇದೆ. ಬೇಕಾದರೆ, ಅವರು ಪ್ರಧಾನಮಂತ್ರಿಯವರನ್ನೂ ಕೂಡ ಪೊಲೀಸ್ ಠಾಣೆಗೆ ಕರೆದುಕೊಂಡು

ಹೋಗಬಹುದು. ಮತ್ತು ರಾಷ್ಟ್ರಪತಿಯವರನ್ನೂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗುವಂತಹ ಕಾನೂನು ಏನಿದೆ, ಇದು ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಈ ವ್ಯವಸ್ಥೆಯನ್ನು ಅಳಿಸಿ ಹಾಕದಿದ್ದರೆ ಇಂತಹ ಘಟನೆಗಳೆಲ್ಲವೂ ಜರುಗುತ್ತಲೇ ಇರುತ್ತವೆ. ಡಿವೈಎಸ್‌ಪಿಯವರು ಈ ವಿಚಾರದಲ್ಲಿ ಮಧ್ಯೆ ಪ್ರವೇಶಿಸಲು ಅವರಿಗಿದು ಸಂಬಂಧವೇ ಇಲ್ಲ. ಅಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಅವರ ಜವಾಬ್ದಾರಿಯನ್ನು ಡಿವೈಎಸ್‌ಪಿಯವರು ನಿರ್ವಹಿಸುವ ಅವಶ್ಯಕತೆಯಿಲ್ಲ. ಆದರೂ ಈ ಪ್ರಕರಣದಲ್ಲಿ ಡಿವೈಎಸ್‌ಪಿಯವರು ಮಧ್ಯೆ ಪ್ರವೇಶಿಸಿದ್ದಾರೆಂದರೆ, ಇದರ ಹಿಂದೆ ಏನೋ ಒಂದು ಭಾರಿ ಉದ್ದೇಶವಿದೆ ಎನ್ನುವುದು ಸ್ಪಷ್ಟವಾಗುತ್ತದೆ. ನಿಜವಾಗಿಯೂ ಆತನಿಗೆ ಏನಾದರೂ ಮಾನನಷ್ಟವಾಗಿದ್ದರೆ, ಸಿವಿಲ್ ಪ್ರೊಸೀಜರ್ ಕೋಡ್ ಆ್ಯಕ್ಟ್ ಪ್ರಕಾರ ಕೋರ್ಟಿನಲ್ಲಿ ಮಾನನಷ್ಟ ಮೊಕದ್ದಮೆ ಹೂಡಬಹುದಿತ್ತು. ಈ ರೀತಿ ಮಾಡದೆ, ಆತ ಹಣ ಕೇಳಿದ್ದಾನೆಂದರೆ, ಅದರರ್ಥ ಬೇರೆ ರೀತಿಯದಾಗುತ್ತದೆ. ಮಾನನಷ್ಟ ಮೊಕದ್ದಮೆ ಹೂಡುವಲ್ಲಿ ಎರಡು ವಿಧಾನಗಳಿವೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಮಾನನಷ್ಟ ಮೊಕದ್ದಮೆ ಹೂಡಬಹುದು. ಮತ್ತೊಂದು, ಸಿವಿಲ್ ಪ್ರೊಸೀಜರ್ ಕೋಡ್ ರೀತ್ಯ ಮಾನನಷ್ಟ ಮೊಕದ್ದಮೆ ಹೂಡಬಹುದು. ಈ ಪ್ರಕರಣದಲ್ಲಿ ಆತನಿಗೆ ನಿಜವಾಗಿಯೂ ಮಾನನಷ್ಟವಾಗಿದ್ದರೆ, ತನ್ನ ಮಾನದ ಬಗ್ಗೆ ಆತನಿಗೆ ಮರ್ಯಾದೆ ಇದ್ದಿದ್ದರೆ, ಸಿವಿಲ್ ಪ್ರೊಸೀಜರ್ ಕೋಡ್ ರೀತ್ಯ ಮಾನನಷ್ಟ ಮೊಕದ್ದಮೆ ಹೂಡಬಹುದಿತ್ತು. ಇದು ಬಿಟ್ಟು ಹಣ ಕೇಳಿದ್ದಾನೆಂದರೆ, ಹಣಕ್ಕೋಸ್ಕರ ತನ್ನ ಮಾನ-ಮರ್ಯಾದೆಯನ್ನೂ ಹರಾಜಿಗಿಟ್ಟಿರುವಂತಹ ಒಬ್ಬ ಮನುಷ್ಯ ಜನಪ್ರತಿನಿಧಿಯಾಗಿರುವ ಶಾಸಕರನ್ನು ಆ ರೀತಿ ನಡೆಸಿಕೊಳ್ಳಲು ಕಾನೂನು ರೀತ್ಯ ಅವಕಾಶವಿರುವುದಿಲ್ಲ. ಆದುದರಿಂದ, ಈ ಪ್ರಕರಣದಲ್ಲಿ ತಕ್ಷಣ ಆತನ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯ ತರಬಯಸುವುದೇನೆಂದರೆ, ಈ ಘಟನೆ ಜರುಗಿದ ದಿವಸವೇ ಅವರನ್ನು ಬಂಧಿಸಿ, ಎಳೆದುಕೊಂಡು ಹೋಗಿ ಲಾಕಪ್‌ನಲ್ಲಿ ಇಟ್ಟಿದ್ದಾರೆಂದು ಗೊತ್ತಾದ ಕೆಲವೇ ನಿಮಿಷಗಳಲ್ಲಿ ನಾನು ಮುಖ್ಯಮಂತ್ರಿಯವರನ್ನು ಸಂಪರ್ಕಿಸಿದೆ. ಮಾನ್ಯ ಮುಖ್ಯಮಂತ್ರಿಯವರು ತಕ್ಷಣವೇ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದರು. ಇಷ್ಟಾದ ನಂತರವೂ ಅವರು ಜಾಮೀನು ಕೇಳಿದಾಗ, 'ನಾನೇನು ತಪ್ಪು ಮಾಡಿದ್ದೇನೆ? ನಾನು ಜಾಮೀನು ಕೊಡುವುದಿಲ್ಲ' ಎಂದೊಡನೆ ಅವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು. ಅದರ ಬಗ್ಗೆ ನಮಗೇನೂ ಚಿಂತೆ ಇಲ್ಲ ಆದರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ನಂತರವೂ, ಈ ಬಗ್ಗೆ ಒಂದು ಹೇಳಿಕೆ ನೀಡಿದರು ಎಂದು ಮಾರನೇ ದಿವಸ ಬೆಳಿಗ್ಗೆ ಇವೆಲ್ಲವನ್ನೂ ಕಾದು ನೋಡಿ, 'ನೀವು 25 ಲಕ್ಷ ರೂಪಾಯಿಗಳ ದಂಡ ಕೊಡಬೇಕು' ಎಂದು ನೋಟೀಸ್

ಕೊಡುತ್ತಾ, 'ನನ್ನ ಮರ್ಯಾದೆ ಹೋಗಿದೆ, ನನಗೆ ಮಾನಸಿಕ ಹಿಂಸೆಯುಂಟಾಗಿದೆ, ನಾನು ಕೋರ್ಟಿಗೆ ತೆರಳಿ ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಹೇಳುವ ಮೂಲಕ ಒಂದು ಸಲ ಇಂತಹ ಪ್ರವೃತ್ತಿ ಪ್ರಾರಂಭವಾದರೆ, ನನಗೆ ನೆನಪಿರುವಂತೆ ಕಳೆದ 56–57 ವರ್ಷಗಳಲ್ಲಿ ಈ ರಾಜ್ಯದಲ್ಲಿ ಶಾಸಕರುಗಳ ಮೇಲೆ ಈ ರೀತಿಯಾಗಿ ನೋಟೀಸ್ ಕೊಟ್ಟು '25 ಲಕ್ಷ ರೂಪಾಯಿಗಳನ್ನು ಕೊಡು, ಇಲ್ಲದಿದ್ದರೆ, ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಕೇಳಿರುವುದು, ನನಗೆ ಗೊತ್ತಿರುವ ಪ್ರಕಾರ ಇದು ಮೊದಲನೆಯದಾಗಿದೆ. ನಮಗೆ ಖಾಕಿ ಬಟ್ಟೆ ಬಗ್ಗೆ ಒಂದು ಗೌರವವಿರಬೇಕಾಗುತ್ತದೆ. ಅವರು ನಮ್ಮ ರಕ್ಷಕರು ಎನ್ನುವ ಭಾವನೆ ಇದೆ. ಈ ಭಾವನೆಯನ್ನು ಒಮ್ಮೆ ಕಳೆದುಕೊಂಡರೆ, ಪೋಲೀಸ್ ಠಾಣೆಗಳಲ್ಲಿ ನಾವು ವಿವಿಧ ರೀತಿಯ ಅಪಮಾನಗಳನ್ನು ಅನುಭವಿಸಿದ್ದೇವೆ. ವಾಟಾಳ್ ನಾಗರಾಜ್‌ರವರೆ, ನೀವೂ ಸಹ ಎಂತೆಂತಹ ಹೋರಾಟಗಳನ್ನು ನಡೆಸಿ, ಎಂತೆಂತಹ ಅಪಮಾನಗಳನ್ನು ಅನುಭವಿಸಿದ್ದೀರಲ್ಲವೇ? ಇವೊತ್ತು ಇಂತಹ ಪ್ರವೃತ್ತಿ ಬೆಳೆಯಲು ರಾಜ್ಯದ ಗೃಹಮಂತ್ರಿಯಾಗಿರುವ ಮಾನ್ಯ ಮುಖ್ಯಮಂತ್ರಿಯವರೇ ಅವಕಾಶ ಮಾಡಿಕೊಟ್ಟರೆ ಪರಿಣಾಮ ಏನಾಗಬಹುದು? ಅದಕ್ಕೋಸ್ಕರ, ನಮ್ಮ ಸ್ನೇಹಿತರೆಲ್ಲರೂ ಇದರ ಬಗ್ಗೆ ಮಾತನಾಡುವಾಗ ನಾವೆಲ್ಲರೂ ಬಹಳ ಶಾಂತ ರೀತಿಯಿಂದ, ಸಮಾಧಾನದಿಂದಿದ್ದೆವು. ನಾವೆಲ್ಲರೂ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇವೆ. ನಾನು ಇದರ ಬಗ್ಗೆ ಹೆಚ್ಚು ಮಾತನಾಡಬಾರದು. ಏಕೆಂದರೆ, ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಇಂಟರ್‌ಫಿಯರ್ ಆಗಿದ್ದರೂ ಸಹ ಆತನ ಧೈರ್ಯ ಎಷ್ಟು? ಸೊಕ್ಕು ಎಷ್ಟು? ಧಿಮಾಕು ಎಷ್ಟು? ಈ ತರಹ ನೋಟೀಸ್ ಕೊಡುತ್ತಾರೆಂದರೆ, ಪೋಲೀಸ್ ಅಧಿಕಾರಿಗಳಿಗೆ ಏನಾದರೂ ಅನ್ನಿಸಬೇಕಲ್ಲಾ? ತಾವು ಉನ್ನತಾಧಿಕಾರಿಗಳನ್ನು ಕರೆಸುವ ಮೂಲಕ ಇಷ್ಟೊತ್ತಿಗೆ ಎಚ್ಚರಿಗೆ ನೀಡಿದ್ದರೆ. ನನಗೆ ಅರ್ಥವಾಗುತ್ತಿತ್ತು. ಇಷ್ಟರೊಳಗಾಗಿ ನೀವು ಆತನನ್ನು ಕರೆದು ಮಾತನಾಡಿ 'ಹೋಗಿ ಕ್ಷಮಾಪಣೆ ಕೇಳಿ ಬಾ' ಎಂದೋ ಇಲ್ಲವೇ 'ವಿತ್‌ಡ್ರಾ ಮಾಡಿಕೊಳ್ಳಿ' ಎಂದಾದರೂ ಉನ್ನತಾಧಿಕಾರಿಗಳಿಗೆ ಸೂಚಿಸುವ ಮೂಲಕ ಅವರಿಗೆ ಹೇಳಿಸಬಹುದಿತ್ತಲ್ಲವೇ? ಈ ಪ್ರಕರಣದಲ್ಲಿ ಏನೂ ಮಾಡದೆ ಈ ಸಧನದಲ್ಲಿ ಚರ್ಚೆಯಾಗುವವರೆಗೂ ಸುಮ್ಮನೆ ಇದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗಿದ್ದೇನೆ. ನಿಮ್ಮಲ್ಲಿಗೆ ರಕ್ಷಣೆ ಕೇಳಿ ನಾನು ಬಂದಿಲ್ಲ. ನಿಮ್ಮ ಕಾಲದಲ್ಲಿ ಈ ರೀತಿಯ ಅಪಮಾನಕರ ಘಟನೆ ಜರುಗಬಾರದು. ಪೋಲೀಸ್ ಅಧಿಕಾರಿಗಳ ವರ್ತನೆ ಕುರಿತಂತೆ ನಿಮ್ಮ ಗಮನಕ್ಕೆ ತರಲು ಬಂದಿದ್ದೇನೆ' ಎಂದು ಹೇಳಿ ವಾಪಸ್ಸು ಬಂದಿದ್ದೇನೆ. ಆದುದರಿಂದ, ದಯಮಾಡಿ ಆತನನ್ನು ಅಮಾನತುಗೊಳಿಸಿ, ತನಿಖೆಗೊಳಪಡಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ, ಈ ಪ್ರಕರಣ ಹಕ್ಕುಬಾಧ್ಯತಾ ಸಮಿತಿ ಮುಂದೆ ಬರುತ್ತದೆ, ಸಮಿತಿಯವರು ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಆರ್. ರಾಜೇಂದ್ರನ್ (ಕೆ.ಜಿ.ಎಫ್) : ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ವಿಷಯ ಕುರಿತಂತೆ ಶಾಸಕ ಮಿತ್ರರೆಲ್ಲರೂ ಸಾಕಷ್ಟು ಮಾತನಾಡಿದ್ದಾರೆ. It is a shame. ಒಬ್ಬ ಶಾಸಕರನ್ನು ಜೈಲಿಗೆ ಹಾಕುವ ಮೂಲಕ ಅವರಿಗೆ ಅಪಮಾನವೆಸಗಿದ್ದಾರೆ. ಆದರೆ, ಡಿವೈಎಸ್‌ಪಿಗೆ ಇದರಿಂದ ಯಾವುದೇ ಅವಮಾನವಾಗಿಲ್ಲ. ಅವರ (ಶಾಸಕರು) ಮುಖ ಗಮನಿಸಿದರೆ ಅವರು 25 ಲಕ್ಷ ರೂಪಾಯಿಗಳನ್ನು ಕೊಡುವ ತರಹ ಕಾಣುತ್ತಾರೆಯೇ? ಇಲ್ಲವೇ, ಡಿವೈಎಸ್‌ಪಿ ಅವರನ್ನು ಅಟ್ಯಾಕ್ ಮಾಡುವ ತರಹ ಕಾಣುತ್ತಾರೆಯೇ? ಪೋಲೀಸರು ಡ್ರೆಸ್ ಹಾಕಿಕೊಂಡ ಬಳಿಕ ಅವರಿಗೆ ಒಂದು ಗೌರವ ಇರುತ್ತದೆ. ಅವರು ಕೇಸ್‌ಗಳನ್ನು ಹೇಗೆ ಬರೆದಿದ್ದಾರೆಂದರೆ ಸೆಕ್ಷನ್ 128, 143, 144 ಮತ್ತು ಸೆಕ್ಷನ್ ಹೀಗಾದರೆ ಇವರೆಲ್ಲರೂ ಮೆಡಿಕಲ್ ಲ್ಯಾಬ್‌ನಲ್ಲಿರಬೇಕು! ಒಬ್ಬನನ್ನು ಕರೆದುಕೊಂಡು ಹೋಗಿ ಚೆಕ್ ಮಾಡಿ ಎಂದರೆ 'Sugar, Mucus, Urine' ಎಂದು ಬರೆಯುತ್ತಾರೆ! ಅವರು ಒಂದು ಪಟ್ಟಿ ಮಾಡಿಕೊಂಡಿದ್ದಾರೆ. ಇವರನ್ನು ಏಕೇ ಕೇಳಿದರೂ ತಕ್ಷಣ 'ಇವರು ನಮ್ಮನ್ನು ಹೊಡೆಯುವುದಕ್ಕೆ ಬಂದರು' 'ನಮ್ಮ ಮೇಲೆ ಜೋರು ಮಾಡಿದರು' 'ಶರ್ಟ್ ಹಿಡಿದುಕೊಂಡರು' ಕಾಲರ್ ಹಿಡಿದುಕೊಂಡರು ಮುಂತಾಗಿ ಈ ರೀತಿ ಬರೆಯುವುದಕ್ಕೆಂದೇ ಒಬ್ಬ ಕ್ಲರ್ಕ್ ಇದ್ದಾನೆ. ಆತನಿಗೆ ಹೇಳಿದರೆ ಸಾಕು, ಯಾವ್ಯಾವ ರೀತಿಯ ಶಿಕ್ಷೆಗಳಿವೆಯೋ ಅವೆಲ್ಲವನ್ನೂ ಬರೆದುಕೊಡುತ್ತಾನೆ. ಇವರು ಅದಕ್ಕೆ ಸಹಿ ಮಾಡುತ್ತಾರೆ. ಇಂತಹ ಅಧಿಕಾರಿಗಳಿಗೆ, all IPS Officers are learned people. ಅವರಿಗೆ ಕೇಸ್ ಬರೆಯಲು ಗೊತ್ತಿಲ್ಲದಿದ್ದರೆ, even a dog will not respect. That is the only main problem. ಐಎಎಸ್ ಅಧಿಕಾರಿ ಕಡೆ ಇರುವ ಜನರು ಜೋರಾಗಿ ಮಾತನಾಡುತ್ತಾರೆ. ಅವರು ಬರೆಯುವುದೂ ಇಲ್ಲ. ಅರೆಸ್ಟ್ ಮಾಡುವುದೂ ಇಲ್ಲ. ಇದೊಂದು ಮಾತ್ರ ಇರುವುದರಿಂದಲೇ ಅವರು ಎಲ್ಲರನ್ನೂ ಬೈಯ್ಯುವುದು. ಅವರು ಹೇಳುವುದು ಹೇಗಿದೆಯೆಂದರೆ 'ನಾವು ಪ್ರಧಾನಮಂತ್ರಿಯವರನ್ನೂ ಅರೆಸ್ಟ್ ಮಾಡುತ್ತೇವೆ' 'ಊರಿನಲ್ಲಿರುವವರನ್ನೆಲ್ಲಾ ಅರೆಸ್ಟ್ ಮಾಡುತ್ತೇವೆ' 'ಸೆಂಟ್ರಲ್ ಗವರ್ನಮೆಂಟ್‌ನಲ್ಲಿರುವ ಮಿನಿಸ್ಟರ್ ಅನ್ನೂ ಸಹ ಅರೆಸ್ಟ್ ಮಾಡುತ್ತೇವೆ' ಎಂದು ಹೇಳುತ್ತಾರೆಂದರೆ, ಅದಕ್ಕೇ 'ನಾವು ಯಾರನ್ನೂ ಬಿಡುವುದಿಲ್ಲ'ವೆಂದು ನಕ್ಸಲೈಟ್ಸ್ ಹೇಳುವುದು! They are the right person. ಆದರೆ, ಇವರು ಏನು ಮಾಡುತ್ತಾರೆಂದರೆ, ನಾವು ಹೋಗಿ ಕೇಳಿದಾಗ, ನಮಗಿರುವ ಭಯವೇನೆಂದರೆ, ಎನ್‌ಕೌಂಟರ್ ಮಾಡಿಬಿಡುತ್ತಾರೆ! ಅವರಿಗೆ ನಾವೇನಾದರೂ oblige ಮಾಡಲಿಲ್ಲವೆಂದರೆ, ಎನ್‌ಕೌಂಟರ್ ಮಾಡಿ ಮುಗಿಸಿಬಿಡುತ್ತಾರೆ! 'ಆತ ನನ್ನನ್ನು ಕೊಲೆ ಮಾಡಲು ಬಂದಿದ್ದ. ಅದಕ್ಕೋಸ್ಕರ, ಎನ್‌ಕೌಂಟರ್ ಮಾಡಬೇಕಾಯಿತು' ಎಂದು ಒಂದು ಚಿಕ್ಕ ಚಾಕು ತೆಗೆದುಕೊಂಡು ಕೈಯನ್ನು ಕತ್ತರಿಸಿಕೊಂಡ ರೀತಿ ನಾಟಕವಾಡಿ, ಅದರ ಮೇಲೆ ದೊಡ್ಡದಾಗಿ ಪಟ್ಟಿ ಕಟ್ಟಿಕೊಳ್ಳುತ್ತಾನೆ. ಆ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತದೆ. ಆದರೆ, ಆತ ಕಟ್ಟಿಕೊಂಡಿರುವ ಪಟ್ಟಿಯನ್ನು ಬಿಚ್ಚಿದರೆ ಅಲ್ಲಿ ಗಾಯದ ಗುರುತೂ ಇರುವುದಿಲ್ಲ! ನಮ್ಮ ಊರಿನಲ್ಲಿ ಇದೇ ರೀತಿ ನಡೆದಿರುವುದು! ಇಲ್ಲಿ ಒಬ್ಬ ಎಂಎಲ್‌ಎಗೆ ರಕ್ಷಣೆ ಇಲ್ಲವೆಂದರೆ, ನಾಳೆ ದಿವಸ

ನಮ್ಮನ್ನೂ ಜೈಲಿಗೆ ಕಳುಹಿಸುತ್ತಾರೆ. ನಮ್ಮ ಊರಿನಲ್ಲಿ ಪೊಲೀಸ್ ಅಧಿಕಾರಿಗಳು ಏನು ಮಾಡುತ್ತಾರೆಂದರೆ, 'ಏಯ್, ಎತ್ತಿ ಒಳಗಡೆ ಹಾಕು' 'ಬಳ್ಳಾರಿಗೆ ಹಾಕು' ಎನ್ನುತ್ತಾರೆ! ಇದೇನು ತಮಾಷೆಯೇ? Is it the way of commanding a legislator? After all, he is holding one Police Department. We are attending all the departments. ಜನರಿಗೆ ಕುಡಿಯುವ ನೀರಿನ ಸೌಲಭ್ಯ ಸಿಗಲಿಲ್ಲವೆಂದರೆ ನಾವು ನೀರು ಸರಬರಾಜು ಮಾಡುವ ಇಲಾಖೆಯನ್ನು ಸಂಪರ್ಕಿಸಬೇಕು. ಆದರೆ, ಪೊಲೀಸ್ ಅಧಿಕಾರಿಗಳಾದವರು ಕಾನೂನನ್ನು ಈ ರೀತಿ ಜಾಲಿಯಾಗಿ ನಿರ್ವಹಿಸುತ್ತಾರೆ! ಅದನ್ನು ಬಿಟ್ಟು ಅವರು ಬೇರೆ ಇನ್ನೇನು ಮಾಡುತ್ತಾರೆ? ಅವರಿಂದ ಜನರಿಗೆ ರೇಷನ್ ಕಾರ್ಡ್ ಒದಗಿಸಿಕೊಡುವುದಕ್ಕಾಗುತ್ತದೆಯೇ? ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿಕೊಡುವುದಕ್ಕಾಗುತ್ತದೆಯೇ? ನಾವು ಯಾವುದೋ ಒಂದು ವಿಚಾರವಾಗಿ ಪೊಲೀಸ್ ಠಾಣೆಗೆ ಹೋದೆವೆಂದು ಇಟ್ಟುಕೊಳ್ಳಿ. ಅಲ್ಲಿರುವ ಪೊಲೀಸ್ ಅಫೀಸರ್ ಏನು ಹೇಳುತ್ತಾನೋ ಅದನ್ನು ಕೇಳಿಕೊಂಡು 'ನೀವೆಲ್ಲರೂ ಹೊರಗಡೆ ಹೋಗಿ. ಇಲ್ಲದಿದ್ದರೆ, ಲಾಠಿಚಾರ್ಜ್ ಮಾಡುತ್ತೇವೆ' ಎಂದು ಹೇಳಿದ ತಕ್ಷಣ ನಾವು ಹೊರಬಂದು ಬಿಡಬೇಕು. ಎಲ್ಲರಿಗೂ ಇಪ್ಪತ್ತು ಕಿಲೋ ಅಕ್ಕಿ ಒದಗಿಸಿಕೊಡಿರೆಂದರೆ ಅವರು ತರಿಸಿಕೊಡುವುದಕ್ಕಾಗುತ್ತದೆಯೇ? ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕು. ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡುತ್ತೇನೆಂದು ಸುಮ್ಮನೆ ಬಾಯಲ್ಲಿ ಹೇಳಿಕೊಂಡು, ಸ್ಟೈಲ್ ಮಾಡಿಕೊಂಡು ಹೋಗಬಾರದು. ಈಗ ಎರಡು ಕೈಗಳಿವೆ. ನಮಸ್ಕಾರ ಹೇಳಬೇಕೆಂದು ಕಾನೂನು ಇದೆ. ಒಂದು ಕೈ ಮೇಲೆತ್ತುವ ಮೂಲಕ ನಮಸ್ಕಾರವೆಂದು ಹೇಳಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಆದರೆ, ಯಾವ್ಯಾವುದನ್ನು ಯಾವ್ಯಾವ ರೀತಿ ಮಾಡಬೇಕೆಂಬ ಬಗ್ಗೆ ರೀತಿ-ನೀತಿಗಳಿವೆ. ಈಗ ಹಸ್ತಲಾಘವ (shake hand) ಮಾಡಬೇಕೆಂದರೆ, ಎರಡೂ ಕೈಗಳನ್ನೂ ಮುಂದೆ ತಂದು shake hand ಮಾಡಬಹುದು. ಒಂದು ಕೈಯಲ್ಲೂ shake hand ಮಾಡಬಹುದು. ತಪ್ಪೇನೂ ಇಲ್ಲ. ಆದರೆ, ಎಲ್ಲಿ ತಪ್ಪಾಗುತ್ತದೆಂದರೆ, ಸೆಲ್ಯೂಟ್ ಹೊಡೆಯುವ ಸಮಯದಲ್ಲಿ ಒಂದು ಕೈ ಎತ್ತಿ ಸೆಲ್ಯೂಟ್ ಹೊಡೆಯುವ ಬದಲು ಎರಡೂ ಕೈಗಳನ್ನೂ ಮೇಲೆತ್ತಿ ಸೆಲ್ಯೂಟ್ ಹೊಡೆದರೆ ಅದು ಅಸಹ್ಯವೆನಿಸುತ್ತದೆ! That is the law. ಅಲ್ಲವೇ? 'ಎರಡು ಕೈಗಳಿವೆ, ಆದುದರಿಂದ, ನಾನು ಹೀಗೇ ಮಾಡುವುದು. ಅದೇ ರೀತಿ ಸೆಲ್ಯೂಟ್ ಹೊಡೆಯಬೇಕಾದಾಗಲೂ ಎರಡೂ ಕೈಗಳನ್ನೂ ಮೇಲೆತ್ತಿ ಹೊಡೆಯುತ್ತೇನೆ'ಂದರೆ ಹೇಸಿಗೆಯಾಗುತ್ತದೆ! ಪೊಲೀಸ್ ಡಿಪಾರ್ಟ್‌ಮೆಂಟ್ ಮಾಡುವುದೂ ಅದೇ. 'ನನ್ನದೇನೂ ತಪ್ಪಿಲ್ಲದೆ, ಎರಡೂ ಕೈಗಳಿಂದ ಸೆಲ್ಯೂಟ್ ಮಾಡಿದರೂ ಕೂಡ ಅದನ್ನು ಪಾಪವೆಂದು ಹೇಳುವುದಕ್ಕಾಗುತ್ತದೆಯೇ? ಎಂದು ಅವರು ಹೇಳುತ್ತಾರೆ! ನನ್ನ ಮತಕ್ಷೇತ್ರದ ಊರಿನಲ್ಲಿ ನನಗೆ ಭಯವಾಗಿರುವುದೇನೆಂದರೆ, ಯಾವುದೇ ತರಹದ ಸಿವಿಲ್ ಕೇಸ್ ನನ್ನ ಮೇಲಿಲ್ಲ. ನನಗೆ

ಭಯವಾಗಿರುವುದೇನೆಂದರೆ, ಯಾವುದಾದರೊಂದು ಕೇಸ್ ದಾಖಲಿಸಿ ನನ್ನನ್ನು ಜೈಲಿಗೆ ಹಾಕಬೇಕೆಂದು ಕಾಯುತ್ತಿರುತ್ತಾರೆ! ಯಾವುದಾದರೊಂದು ಕೇಸ್ ಹಾಕಿ ಜೈಲಿಗೆ ಕಳುಹಿಸಬೇಕು ಎಂದು They are eagerly waiting what for? ಎನ್‌ಕ್ವೈರಿ ಮಾಡಬೇಕು. Before they write. ಶಾಸಕರುಗಳನ್ನು ಬಂಧಿಸುವ ಮುನ್ನ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದು ಅವರ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ಆದರೆ, ಇವರು ಶಾಸಕರುಗಳನ್ನು ಬಂಧಿಸುವ ಮುನ್ನ ಸಭಾಧ್ಯಕ್ಷರ ಅನುಮತಿ ಕೇಳುತ್ತಾರೆಯೇ? ಬದಲಾಗಿ ಅವರನ್ನು ಬಂಧಿಸುವ ಮೂಲಕ ಜೈಲಿಗೆ ತಳ್ಳಿ, ಹೊಡೆದು ಬಳಿಕ, 'ಸ್ವಾಮಿ, ಆತ ತಪ್ಪು ಮಾಡಿಲ್ಲ' ಎಂದು ಹೇಳುತ್ತಾರೆ! ಮತ್ತು ಅವರು ಮಂತ್ರಿಗಳ ಬಳಿಗೆ ಹೋಗಿ 'ಸರ್, ಅವರು ಸುಳ್ಳು ಹೇಳುತ್ತಾರೆ. ನನ್ನನ್ನು ಬೈಯ್ಯುತ್ತಾರೆ' ಎಂದೆಲ್ಲಾ ಹೇಳುತ್ತಾರೆ. ಆದರೆ, ಪೊಲೀಸ್ ಠಾಣೆಯಲ್ಲಿ ಈತ ಬಂಧಿತರನ್ನು ಬೈಯ್ಯುವುದಿಲ್ಲವೇ? ಹೆಣ್ಣು ಮಕ್ಕಳನ್ನು ಬೈಯ್ಯುವುದಿಲ್ಲವೇ? Therefore I don't want to talk about the Police Department. But it is a shame on the part of a Legislator, who was fighting for his right. They have all the rights. We can fight anywhere. ಹತ್ತು ಜನರು ಬರುತ್ತಾರೆ, 'ಸ್ವಾಮಿ, ನಮಗೆ ಈ ತರಹ ಅನ್ಯಾಯವಾಗಿದೆ, ಕುಳಿತುಕೊಂಡು ಧರಣಿ ಮಾಡುತ್ತೇವೆ' ಎಂದರೆ, 'ಏಯ್, ಪಬ್ಲಿಕ್‌ಗೆ ನೀವು ತೊಂದರೆ ಕೊಡುತ್ತಿದ್ದೀರಿ' ಎಂದು ಹೇಳುತ್ತಾರೆ. ಆದರೆ, ಪಬ್ಲಿಕ್‌ಗೆ ನಿಜವಾಗಿಯೂ ತೊಂದರೆ ಕೊಡುವವನು ಈತನೇ ಆಗಿದ್ದಾನೆ. ಉದಾಹರಣೆಗೆ, ಕ್ಲಬ್‌ಗಳನ್ನು ರಾತ್ರಿ 10.30 ಗಂಟೆ ನಂತರ ಮುಚ್ಚಬೇಕೆಂದು ಕಾನೂನಿದ್ದರೂ, ಮಧ್ಯರಾತ್ರಿ 12.30 ಗಂಟೆ ತನಕವೂ ಕ್ಲಬ್ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತಾನೆ! ಶಾಸಕರು ಈ ಬಗ್ಗೆ ದೂರು ನೀಡಿದರೂ ಕೇಳುವುದಿಲ್ಲ. ಕ್ಲಬ್‌ನವರು ಈತನಿಗೆ ಹಣ ನೀಡಿಲ್ಲವೆಂದರೆ, ಕ್ಲಬ್ ಅನ್ನು ರಾತ್ರಿ 10.00 ಗಂಟೆಗೆ ಮುಚ್ಚುವಂತೆ ತಗಾದೆ ಶುರು ಮಾಡುತ್ತಾನೆ. 'ನಿಮ್ಮ ಕ್ಷೇತ್ರದಲ್ಲಿ ಕಳ್ಳಬಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡಲಾಗುತ್ತಿದೆಯೇ?' ಎಂದು ಒಂದು ಪ್ರಶ್ನೆ ಕೇಳಿ ನೋಡಿ. 'ಆ ತರಹ ನಮ್ಮ ಕ್ಷೇತ್ರದಲ್ಲಿ ನಡೆದೇ ಇಲ್ಲ'ವೆಂದು ಸಹಿ ಹಾಕಿಕೊಡುತ್ತಾರೆ! ಅವರಿಗೆ ಹಣ ಕೊಟ್ಟಿಲ್ಲವೆಂದರೆ, ಬಂಧಿಸಿ ಕರೆದುಕೊಂಡು ಬಂದು, ಹೊಡೆದು, ಆತನ ಮೇಲೆ ಕೇಸ್ ದಾಖಲಿಸುತ್ತಾರೆ. These are all the barricades. Therefore the Honble Chief Minister who is holding the Home Minister's post, must take into task; He should not spare. ಅವರು ಡಿವೈಎಸ್‌ಪಿ ಆಗಿರಲಿ, ಎಸ್‌ಪಿ ಆಗಿರಲಿ ನಾವು ಗೌರವ ನೀಡುತ್ತೇವೆ. ನಾವು ಪೊಲೀಸ್ ಅಧಿಕಾರಿಗಳಾದ ಯಾರನ್ನೂ ಕೂಡ 'ಏಯ್, ಡಿವೈಎಸ್‌ಪಿ ಬಾ ಇಲ್ಲಿ' ಎಂದು ಕರೆಯುವುದಿಲ್ಲ. ಆದರೆ, ನಮ್ಮೆದುರಿಗೆ ಅವರು ಸಿಕ್ಕಾಗ ನಾವು 'ನಮಸ್ಕಾರ' ಎಂದು ಹೇಳಿದರೆ, ಅವರು 'ಓಹ್' ಎಂದು ಹೇಳುತ್ತಾರೆ! ಅವರದ್ದು ಅದೇನು ಸ್ಟೈಲು. ನಾವೆಲ್ಲರೂ

ಗೂಬೆಗಳೇ? ಎಂಎಲ್ಎಗಳಾದವರು ಓದಿಲ್ಲವೇ? ನಾವೇನೂ ಕಡಿಮೆ ಇಲ್ಲ. ಆ ದಿವಸ ಅವರು ಆ ಡಿಪಾರ್ಟ್‌ಮೆಂಟ್‌ಗೆ ಹೋದರು ಆದರೆ ನಾವು ಈ ಡಿಪಾರ್ಟ್‌ಮೆಂಟ್ ಬಂದೆವು. ಆದರೆ ನಾವು ಅವರ ಹಿಂದೆ ಹೀಗೆಯೇ ನಡೆದುಕೊಂಡು ಹೋಗಬೇಕು, ಏನೋ ಚಿಂತನೆಯನ್ನು, ದೇವರನ್ನು ತಲೆಯ ಮೇಲೆ ಇಟ್ಟುಕೊಂಡು ಹೋಗುವ ರೀತಿ ಹೋಗಬೇಕು. ಸಾರ್, ಸಾರ್ They are waiting for an opportunity. That should not. In your regime, we have high regards for you. Our Honble Chief Minister, as told by the Hon'ble Member Sri Ramesh Kumar, he is a top man. You can command the police department. Transfer ಸಮಯದಲ್ಲಿ ಬಂದು ನೋಡಿ, ನಿಮಗೆ ಟ್ರಾನ್ಸ್‌ಫರ್ ಆಗುತ್ತದೆ ಎಂದಾಗ ಮಾತ್ರ ಇವರು ನಮಗೆ ಬೆಂಡ್ ಆಗುವುದು, ಅಲ್ಲಿಯವರೆಗೆ ಆಗುವುದೇ ಇಲ್ಲ. ಟ್ರಾನ್ಸ್‌ಫರ್ ಮಾಡಿಕೊಟ್ಟ ಬೆಳಿಗ್ಗೆಯೇ ಎದೆಯನ್ನು ಸೆಟೆದು ನಿಂತುಕೊಳ್ಳುತ್ತಾರೆ, ಒಂದೊಂದು ದಿವಸ ಟ್ರಾನ್ಸ್‌ಫರ್ ಮಾಡಿ ಇವರನ್ನು ಆಗ ಗೊತ್ತಾಗುತ್ತದೆ, ಇವರಿಗೆ ಎರಡು ವರ್ಷ ಆದ ಮೇಲೆ ನನ್ನನ್ನು ಮುಟ್ಟುವುದು ಎಂದು ತಿಳಿದು ಕೊಂಡಿದ್ದಾರೆ. ಆದ್ದರಿಂದ Any moment, they should be suspended and thrown them out. ಅಂತ ಸ್ಥಿತಿ ಬಂದರೆ, ಇವರೇ ರೌಡಿಗಳಿಗೆ ಸಾಯಿಸಿಬಿಡು ನಾನು ನೋಡಿಕೊಳ್ಳುತ್ತೇನೆಂದು ಹೇಳಿಕೊಡುತ್ತಾರೆ. That all should be monitored. For the social and economic development of the people, this is important. ನಾವು ಜೋರು ಮಾಡಿಬಿಟ್ಟರೆ ಇವರೇ ಹೇಳಿಕೊಡುತ್ತಾರೆ, ಇದರ ಬಗ್ಗೆ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ವಿವರವಾಗಿ ಮಾತನಾಡೋಣ. ಸಧ್ಯಕ್ಕೆ What happened to my hon'ble friend, may happen to all the 225 MLA's. ನಾಳೆ ನಮಗೆ ಆಗಬಹುದು, Please put an end to it. Let my hon'ble Chief Minister may please pass an order. ನಮ್ಮ ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು ಹೇಳಿದ ರೀತಿ ಒಂದು 24 ಲಕ್ಷ ರೂ. ಸರ್ಕಾರ ಏನಾದರೂ ವ್ಯವಸ್ಥೆ ಮಾಡಿ ಅವರ ಗೌರವವನ್ನು ಕಾಪಾಡಿ. ಬೇಕಾದರೆ ನಾವೆಲ್ಲಾ ಒಂದೊಂದು ದಿವಸದ ನಮ್ಮ ಸಂಬಳವನ್ನು ಕೊಡುತ್ತೇವೆ. ಇನ್ನೇನು ಮಾಡಲು ಆಗುತ್ತದೆ? ಅವರ ಮುಖವನ್ನು ನೋಡಿದರೆ ಕೊಡಲು ಆಗುತ್ತದೆಯೆ? ಇಲ್ಲ ಎಂದು ಹೇಳುತ್ತಾರೆ. ಸುನಾಮಿ ರೀತಿ ಏನಾದರೂ ಒಂದು ಡೊನೇಷನ್ ಮಾಡಿ. ಇಲ್ಲ ಎಂದರೆ ಬೇರೆ ಗತಿಯೇ ಇಲ್ಲ. ಪೊಲೀಸ್ ಇಲಾಖೆಯವರ ಮಾನವನ್ನು ಉಳಿಸಲು ಬೇಕಾದರೆ ನಾವು ದುಡ್ಡನ್ನು ಕೊಡುತ್ತೇವೆ. ಅದನ್ನು ವಾಪಸ್ ತೆಗೆದುಕೊಳ್ಳಲೇಬೇಕು ಎಂದು ಹೇಳಿ please pass an order immediaetely to suspend him or constitute a committee to conduct an enquiry whether it was true or false. I am thankful to you for giving me

this opportunity.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾಹಿತಿ ಕೊಡಲು ಅಪೇಕ್ಷೆ ಪಡುತ್ತೇನೆ. ನಾನು ಪಕ್ಕದ ಕ್ಷೇತ್ರದವನು. ಈ ಘಟನೆ ನಡೆದ ತಕ್ಷಣ ನಾನು ಮಾನ್ಯ ಜೀವರಾಜ್ ಅವರೊಡನೆ ಟೆಲಿಫೋನ್‌ನಲ್ಲಿ ಮಾತನಾಡಿದೆ, ಅವರು ನನ್ನನ್ನು ಕರೆದುಕೊಂಡು ಹೋಗಿ ಸೆಲ್‌ನಲ್ಲಿ ಹಾಕಿಬಿಟ್ಟಿದ್ದಾರೆ, ನನ್ನ ಪರಿಸ್ಥಿತಿ ಈ ರೀತಿ ಆಯಿತು ಎಂದು ಬಹಳ ಖೇದರಿಂದ ನನ್ನ ಜೊತೆ ಮಾತನಾಡಿದರು. ಅವರು ಸೆಲ್‌ನಲ್ಲಿ ಇದ್ದಾಗಲೇ ಅವರ ಸೆಲ್‌ಫೋನ್‌ಗೆ ಮಾತನಾಡಿದವನು ನಾನು. ತಕ್ಷಣ ನಾನು ಮಾನ್ಯ ಯಡಿಯೂರಪ್ಪನವರನ್ನು ಕಾಂಟಾಕ್ಟ್ ಮಾಡಿದೆ, ಮಾನ್ಯ ಯಡಿಯೂರಪ್ಪನವರು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದರು, ನಾನು ಇಲ್ಲಿ ಕೊಡಬೇಕಾದ ಮಾಹಿತಿ ಏನೆಂದರೆ, ಈ ಘಟನೆ ನಡೆಯುತ್ತದೆ, ಹೋರಾಟ ನಡೆಯುತ್ತದೆ ಎಂಬ ಕಲ್ಪನೆಯೇ ಇಲ್ಲದಿದ್ದಾಗ ಹದಿನೈದು ದಿನಗಳ ಮೊದಲೇ ಮಾನ್ಯ ಮುಖ್ಯಮಂತ್ರಿಗಳನ್ನು ಕಾಣಲು ಮಾನ್ಯ ಜೀವರಾಜ್‌ರವರು ಇಲ್ಲಿಗೆ ಬಂದಿದ್ದಾರೆ. ನನ್ನ ಕ್ಷೇತ್ರದಲ್ಲಿ 12 ಕ್ಲಬ್‌ಗಳು ಓಪನ್ ಆಗಿವೆ, ಡಿ.ವೈ.ಎಸ್.ಪಿ. ಯವರ ನೇತ್ರತ್ವದಲ್ಲಿ ಇಸ್ಪೀಟ್ ಕ್ಲಬ್‌ಗಳ ಜುಗಾರಿ ನಡೆಯುತ್ತಿದೆ, ಊರೂರಿಗೆ ಹೋದಾಗ ಹೆಣ್ಣು ಮಕ್ಕಳು ನಮ್ಮ ಗಂಡಂದಿರು ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಜೀವರಾಜ್‌ರವರೇ ನಿಮಗೆ ಓಟನ್ನು ಕೊಟ್ಟು ಗೆಲ್ಲಿಸಿದ ಮೇಲೆ ನಮ್ಮ ಮನೆ ಪರಿಸ್ಥಿತಿ ಹೀಗಾಯಿತು, ನಾವು ಹಾಳಾಗಿ ಹೋಗುತ್ತಿದ್ದೇವೆ, ದಯವಿಟ್ಟು ಆ ಕ್ಲಬ್‌ಗಳನ್ನು ಮುಚ್ಚಿಸುತ್ತಿರೋ ಅಥವಾ ಕ್ಲಬ್‌ಗಳಲ್ಲಿ ನಿಮಗೂ ಮಾಮೂಲಿ ಮಾಡಿಕೊಂಡಿದ್ದೀರೋ ಎಂದು ಕೇಳಿದರಂತೆ. ಅದನ್ನು ಮಾನ್ಯ ಜೀವರಾಜ್ ರವರು ನಮಗೆ ಹೇಳಿದರು. ಮಾನ್ಯ ಜೀವರಾಜ್‌ರವರು ಬೇಜಾರಾಗಿ ಇಲ್ಲಿಗೆ ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಿಕ್ಕಲಿಲ್ಲ, ಆದ್ದರಿಂದ ಮುಖ್ಯಮಂತ್ರಿಗಳ ವಿಶೇಷ ಅಧಿಕಾರಿಗಳಾದ ಶ್ರೀ ಸಿದ್ಧಯ್ಯ ನವರನ್ನು ಭೇಟಿ ಮಾಡಿದ್ದಾರೆ. ನೋಡಿ ನಮ್ಮ ಕ್ಷೇತ್ರದಲ್ಲಿ ಡಿ.ವೈ.ಎಸ್.ಪಿ. ಯವರ ನೇತೃತ್ವದಲ್ಲಿ ಈ ರೀತಿ ಆಗುತ್ತಿದೆ, ದಯವಿಟ್ಟು ಏನಾದರೂ ಮಾಡಬೇಕಲ್ಲಾ ಎಂದು ಅವರಲ್ಲಿ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ತಮ್ಮನ್ನು ಭೇಟಿ ಮಾಡಲು ಬಂದ ಮಾನ್ಯ ಜೀವರಾಜ್‌ರವರು ಮಾನ್ಯ ಸಿದ್ಧಯ್ಯನವರ ಹತ್ತಿರ, ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಬೇಕಾಗಿದೆ, ಡಿ.ವೈ.ಎಸ್.ಪಿ. 12 ಕ್ಲಬ್‌ಗಳನ್ನು ಓಪನ್ ಮಾಡಿಸಿಕೊಂಡು ನನ್ನ ಕ್ಷೇತ್ರಕ್ಕೆ ಅವಮಾನ ಮಾಡಿದ್ದಾರೆಂದು ಹೇಳಲು ಬಂದಿದ್ದಾರೆ, ಈ ಘಟನೆ ನಡೆಯುತ್ತದೆ ಎಂಬ ಕಲ್ಪನೆ ಇಲ್ಲ. ಈ ಘಟನೆ ನಡೆಯುವುದಕ್ಕಿಂತ ಹದಿನೈದು ದಿವಸ ಮೊದಲು; ಮಾನ್ಯ ಸಿದ್ಧಯ್ಯನವರು ಈಗ ಮಂತ್ರಿಮಂಡಲ ರಚನೆಯಾಗುತ್ತಿದೆ, ಮಾನ್ಯ ಮುಖ್ಯಮಂತ್ರಿಯವರು ಬಿಸಿಯಾಗಿದ್ದಾರೆ. ಸ್ವಲ್ಪ ಫ್ರೀಯಾಗಿದ್ದಾಗ ಈ ಮಂತ್ರಿಮಂಡಲ ರಚನೆಯಾದ ತಕ್ಷಣ ಬನ್ನಿ, ಮಾತನಾಡೋಣ, ಅವರನ್ನು ಟ್ರಾನ್ಸ್‌ಫರ್ ಅಥವಾ ಇನ್ನ್ಯಾವುದನ್ನೋ ಮಾಡಲು ತೊಂದರೆ ಇಲ್ಲ ಎಂದು

ಹೇಳಿಕಳುಹಿಸಿದ್ದಾರೆ. ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಬ್ರಹ್ಮದತ್‌ರವರನ್ನು ಭೇಟಿ ಮಾಡಿದ್ದಾರೆ, ಅವರೂ ಸಹ ಅವರ ಮೇಲೆ ಏನಾದರೂ ಮಾಡೋಣವೆಂದು ಸಮಾಧಾನ ಹೇಳಿ ಕಳುಹಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಈ ರೀತಿ ನಡೆಯುತ್ತಿದೆ ಎಂದು ಚಿಕ್ಕಮಗಳೂರಿನ ಎಸ್.ಪಿ. ಯವರ ಹತ್ತಿರ ಮಾತನಾಡಿದ್ದಾರೆ, ಹದಿನೈದು ದಿವಸದ ಮೊದಲು ಇಷ್ಟು ಹೇಳಿ ಹೋಗಿದ್ದಾರೆ. ಸೇಡು ತೀರಿಸಿಕೊಳ್ಳುವುದಕ್ಕಾಗಿ, ಈ ರೀತಿ ನನ್ನ ಮಾಮೂಲಿಗೆ ಹಿರಿಯ ಅಧಿಕಾರಿಗಳ ಹತ್ತಿರ ಹೇಳಿ ಧಕ್ಕೆ ಮಾಡಿದ ಎಂದು. ಏಕೆಂದರೆ ಚಿಕ್ಕಮಗಳೂರಿನ ಎಸ್.ಪಿ. ತಕ್ಷಣ ಅವರಿಗೆ ಮಾತನಾಡಿದ್ದಾರೆ. ಒಬ್ಬ ಪೋಲೀಸ್ ಆಫೀಸರ್ ನಮ್ಮ ಮೇಲೆ ಈ ಸೇಡನ್ನು ತೀರಿಸಿಕೊಳ್ಳುವುದಾದರೆ, ನಾವು ಈ ಸದನದಲ್ಲಿ ಕುಳಿತುಕೊಂಡು ಕೆಲಸ ಮಾಡುವುದು ಹೇಗೆ? ನಮ್ಮ ಕ್ಷೇತ್ರಗಳಲ್ಲಿ ಶಾಂತಿ ಸುವ್ಯವಸ್ಥೆ ಗೌರವ, ಜನರ ಮಾನ ಪ್ರಾಣವನ್ನು ರಕ್ಷಣೆ ಮಾಡುವುದರಲ್ಲಿ ನಾವು ಅವರಿಗೆ ಸಹಕಾರ ಕೊಡುವುದು ಯಾವ ರೀತಿ ಹೇಳಿ? ಅದೇ ಶೃಂಗೇರಿ ಕ್ಷೇತ್ರದಲ್ಲಿ ಬೇಕಾದಷ್ಟು ನಕ್ಸಲೀಯರು ರಕ್ಷಣೆಗೆ ಹೋದಂಥ ಇವರ ಕಾನ್‌ಸ್ಟೆಬಲ್‌ನ್ನು ಎಳೆದುಕೊಂಡು ಹೋದರು, ಅವರಿಗೆ ಈ ಡಿ.ವೈ.ಎಸ್.ಪಿ, ಏನು ಮಾಡಿದರು? ಅವರನ್ನು ಹಿಡಿದರೋ? ಅದನ್ನು ಮಾಡಬಹುದಿತ್ತಲ್ಲಾ? ಜೀವರಾಜ್‌ರವರ ಶರಟನ್ನು ಹಿಡಿದುಕೊಂಡು ಹೋಗಿ ಸೆಲ್‌ಗೆ ತಳ್ಳುವ ಬದಲು ಗನ್ ಹಿಡಿದುಕೊಂಡು ಬಂದು ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ನ್ನು ಎಳೆದುಕೊಂಡು ಹೋದಂಥ ಸಂದರ್ಭದಲ್ಲಿ ನನ್ನ ಇಲಾಖೆಯ ಮರ್ಯಾದೆ ಹೋಗಿದೆಯೆಂದು ಸಿಟ್ಟು ಬರಬೇಕಿತ್ತಲ್ಲಾ? ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕಾಗಿತ್ತಲ್ಲಾ? ಶೃಂಗೇರಿ ಕ್ಷೇತ್ರ ಮಾತ್ರವಲ್ಲ ಮಲೆನಾಡಿನ ಕಾಡುಗಳಲ್ಲಿ ಬಾಂಬುಗಳನ್ನು ಇಟ್ಟುಕೊಂಡಿದ್ದಾರಲ್ಲಾ? ಜೀವರಾಜ್ ಬರಿ ಮೈಕ್ ಹಿಡಿದುಕೊಂಡು ಮಾತನಾಡಿದ್ದು ಒಂದು ಅಪರಾಧವೆಂದು ಸೆಲ್ ಒಳಗೆ ತಳ್ಳುತ್ತಾರೆ, ನನ್ನ ಮತ್ತು ಜೀವರಾಜ್‌ರವರ ಕ್ಷೇತ್ರದಲ್ಲಿ ಕಾಡಿನಲ್ಲಿ ಬಾಂಬನ್ನು ಇಟ್ಟುಕೊಂಡು ಹಫ್ತಾ ವಸೂಲಿ ಮಾಡುತ್ತಿದ್ದಾರೆ, ಅವರ ಮೇಲೆ ಇವರು ಹೋಗಿ ಸೇಡನ್ನು ತೀರಿಸಕೊಳ್ಳಲು ಆಗಲಿಲ್ಲ. ಅಲ್ಲಿಯ ಜನರಿಗೆ ರಕ್ಷಣೆ ಕೊಡಲು ಆಗಲಿಲ್ಲ. ಇದಕ್ಕೆ ರಕ್ಷಣೆ ಕೊಡಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳೇ, ಇದು ಪಕ್ಷ ಮತ್ತು ರಾಜಕಾರಣದ ಪ್ರಶ್ನೆಯಲ್ಲ, ಇದು ಎಲ್ಲರ ಗೌರವದ ಪ್ರಶ್ನೆ, ಅಧಿಕಾರಿಗಳು ಈ ರೀತಿ ನಮ್ಮನ್ನು ನಿಯಂತ್ರಣ ಮಾಡುವುದಾದರೆ, ನಮ್ಮ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುವುದಾದರೆ ನಾವು ಇಲ್ಲಿ ಕೆಲಸ ಮಾಡಲು ಕಷ್ಟವಾಗುತ್ತದೆ, ಚುನಾಯಿತ ಪ್ರತಿನಿಧಿಗಳು ನಾವೆಲ್ಲರೂ ಇದ್ದೇವೆ, ದಯಮಾಡಿ ಇದನ್ನು ನಿಯಂತ್ರಣ ಮಾಡಬೇಕಾಗುತ್ತದೆ, ಒಳ್ಳೆಯ ಮೆಸೇಜ್ ಅಧಿಕಾರಿಗಳಿಗೆ ಹೋಗಬೇಕಾಗುತ್ತದೆ. ಎಲ್ಲಾ ಪೋಲೀಸ್ ಅಧಿಕಾರಿಗಳು ಕೆಟ್ಟವರೆಂದು ನಾನು ಹೇಳುವುದಿಲ್ಲ. ಯಾರು ದುಷ್ಟ. ಕೆಟ್ಟ ಅಧಿಕಾರಿಗಳು ಇದ್ದಾರೆ, ಮಾಮೂಲಿ ತೆಗೆದುಕೊಂಡು ಓಸಿಯಾಡಿಸಿಕೊಂಡು, ಓಸಿ ಪಾರ್ಟನರ್ ಹಾಕಿಕೊಂಡು ನಡೆಯುತ್ತಿದ್ದಾರೆ ಆ ಕ್ಷೇತ್ರದಲ್ಲಿ ನಾವು ಹೇಳುವಂತಿಲ್ಲ ಎಂದಾದರೆ

ನಾಳೆ ಅವರನ್ನು ಹಿಡಿದು ನಿಲ್ಲಿಸುವವರು ಇಲ್ಲದಂತಾಗುತ್ತದೆ. ದಯಮಾಡಿ ಇದನ್ನು ನಿಯಂತ್ರಣಕ್ಕೆ ತರಬೇಕು, ಅವರನ್ನು ಶಿಕ್ಷಿಸಬೇಕು, ಸಸ್ಪೆನ್‌ಷನ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು, ಏಕೆಂದರೆ ಎಲ್ಲಾ ಮಾತನಾಡಿದ್ದಾರೆ, ಚರ್ಚೆ ಮುಂದುವರೆಸುವ ಅಗತ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಮಾತನಾಡಿ.

ಶ್ರೀ ಎನ್. ಧರ್ಮ್‌ಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಒಂದು ಡಿ.ವೈ.ಎಸ್.ಪಿ. ಯವರಿಂದ ಜೀವರಾಜ್‌ರವರ ಘಟನೆ ನಡೆದಿದೆ, ಇದು ದತ್ತಪೀಠದ ಮೇಲೆ ಆಗತಕ್ಕ ಘಟನೆ. ನಾನು ಅದರ ಬಗ್ಗೆ ವಿವರವಾಗಿ ಚರ್ಚೆ ಮಾಡಲು ಸಿದ್ಧನಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪೊಲೀಸ್ ಇಲಾಖೆಯ ಬಗ್ಗೆ ಮಾತನಾಡುವಾಗ ಅವೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವತ್ತು ಎಲ್ಲರೂ ಇದಕ್ಕೆ ಸಹಿ ಹಾಕಿದ್ದೇವೆಂದು ಎಲ್ಲರೂ ತಮ್ಮತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾರಿಗೂ ಶಾಸಕರ ಹಕ್ಕನ್ನು ಮೊಟಕು ಮಾಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ House is Supreme. ಆದರೂ ಘಟನೆ ಏಕಾಗಿದೆ ಎಂಬ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಯಾರ ಬಗ್ಗೆ ನಾವು ಮಾತನಾಡುತ್ತಿದ್ದೇವೆ ಅವನು ಇಲ್ಲಿ ಬಂದು ಎಕ್ಸ್‌ಪ್ಲನೇಷನ್ ಕೊಡತಕ್ಕದ್ದು ಇಲ್ಲ. ಸರಿಯಾದ ರೀತಿಯಲ್ಲಿ ಕಾನೂನಿನ ಪರಿಪಾಲನೆಯಾಗಬೇಕು ಎಂಬ ಆದೇಶವನ್ನು ಸರ್ಕಾರದ ವತಿಯಿಂದ ಕೊಡುತ್ತೇವೆ. ಅಷ್ಟೇ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಅದನ್ನು ಪಾಲನೆ ಮಾಡಬೇಕು ಎಂದು ಮುಖ್ಯ ಮಂತ್ರಿಯ ಅಥವಾ ಗೃಹ ಮಂತ್ರಿಯ ಮತ್ತು ನಮ್ಮಗಳ ನಿರೀಕ್ಷೆ ಇರುತ್ತದೆ. ಇದು ಆಗಿರತಕ್ಕ ಘಟನೆ ಇದು ಆದಮೇಲೆ ಏನೂ ದೊಡ್ಡ ಮಹಾ ಅಪರಾಧವಾಗಿಲ್ಲ ಎನ್ನತಕ್ಕದ್ದು ಇದೆ. ಏಕೆಂದರೆ ಇಲ್ಲೇ ಕುಳಿತು ವಾದವಿವಾದ ನಡೆಯುತ್ತಿದೆ. ಮಾನ್ಯ ಸಿದ್ದಯ್ಯನವರು ಹೇಳಿದರು ಎಂದು ಹೇಳಿದರು. ಒಬ್ಬರು ಶಾಸಕರಿಗೆ ಒಂದಲ್ಲ ಐವತ್ತು ಸಲ ಬೇಕಾದರೂ ಭೇಟಿಯಾದವನು ನಾನು ಒಬ್ಬನೇ. ಎಲ್ಲರಿಗೂ ಮುಂಜಾನೆ ಆರು ಗಂಟೆಯಿಂದ ನಾನು ಭೇಟಿಯಾಗುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಮಾನ್ಯ ಜೀವರಾಜ್‌ರವರೂ ಕೂಡ ಹೇಳಿದಾಗ ಅವರ ಜೊತೆ ನಾನು ಮಾತನಾಡಿದ್ದೇನೆ. ಮಾನ್ಯ ಯಡಿಯೂರಪ್ಪನವರು ಕೂಡ ಬಂದು ಹೇಳಿದ್ದಾರೆ. ಆಗಲೂ ಕೂಡ ಈ ವಿಚಾರದಲ್ಲಿ ಸಂಪರ್ಕ ಮಾಡಿ ಮಾತನಾಡಿದ್ದೇನೆ. ಯಾವಾಗಲೂ ಇಂಥ ಘಟನೆ, ಆದರಲ್ಲೂ ದತ್ತಿ ಪೀಠದಂಥ ಕಾರ್ಯಕ್ರಮ ವಿವಾದಾತ್ಮಕ ಸ್ಥಳದಲ್ಲಿ ನಡೆಯುವಂಥ ಸಂದರ್ಭದಲ್ಲಿ ಬಹಳ ಜಾಗ್ರತೆಯಿಂದ ಅಲ್ಲಿಗೆ ಯಾರು ಬಂದರು, ಯಾರು ಹೋದರು, ಅಲ್ಲಿ ಏನಾಗಿದೆ, ಎನ್ನತಕ್ಕಂಥದ್ದರ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಇವೊತ್ತು ಶಾಸಕರ ಮೇಲಾಗಲಿ, ಲೋಕಸಭಾ

ಸದಸ್ಯರ ಮೇಲಾಗಲಿ, ಒಟ್ಟಾರೆ ಜನಪ್ರತಿನಿಧಿಗಳ ಮೇಲೆ ಕ್ರಮ ತೆಗೆದುಕೊಳ್ಳುವಾಗ ಅದಕ್ಕೆ ಮುಂಚೆ ಸರ್ಕಾರದ ಇಲಾಖೆಯ ಅನುಮತಿಯನ್ನು ಪಡೆಯದೆ ಯಾರೂ ಕೂಡ ಕ್ರಮ ಜರುಗಿಸುವಂತಿಲ್ಲ. ಈಗ ಸಾಕಷ್ಟು ಐ.ಎ.ಎಸ್. ಆಫೀಸರ್‌ಗಳು ಇದ್ದಾರೆ. ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಇಚ್ಛಪಡುವುದಿಲ್ಲ. ಅವರುಗಳು ಬಂದು ನಮ್ಮ ಮೇಲೆ ಸಾರ್ವಜನಿಕರಿಂದ ಮಾನ ಹಾನಿಯಾಗಿದ್ದೆಯಾದ ಕಾರಣ ನಾವು ಅವರ ಮೇಲೆ ಮಾನನಷ್ಟ ಮೊಕದ್ದಮೆ ಹಾಕಲು ಅವಕಾಶ ಮಾಡಿಕೊಡಿ ಎಂದು ಕೇಳಿದರು. ಆದರೆ ನಾನು ಯಾರಿಗೂ ಅವಕಾಶ ಮಾಡಿಕೊಟ್ಟಿಲ್ಲ. ಏಕೆಂದರೆ ನೀವೆಲ್ಲರೂ ಕೂಡ ಒಂದು ರಾಜ್ಯದ ಅಧಿಕಾರಿಗಳಾಗಿ ಕೆಲಸವನ್ನು ಮಾಡುತ್ತಿದ್ದೀರಿ, ಸಾರ್ವಜನಿಕರ ಮೇಲೆ ಈ ತರಹದ ಮೊಕದ್ದಮೆಯನ್ನು ಹಾಕಲು ಈ ಸರ್ಕಾರದಲ್ಲಿ ನನ್ನ ಅವಧಿಯಲ್ಲಿ ನಾನು ಯಾರಿಗೂ ಕೂಡ ಪರವಾನಗಿಯನ್ನು ಕೊಡುತ್ತಿಲ್ಲವೆಂದು ಹೇಳಿದೆ. ಆದರೆ ಇಲ್ಲಿ ಈ ಘಟನೆ ನಡೆದಿರುವುದಕ್ಕೆ ಸಂಬಂಧಪಟ್ಟಂತೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 191ರಡಿಯಲ್ಲಿ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದು ಹೇಳಿದ್ದಾರೆ. ಈಗ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಅದು ದೊಡ್ಡದಾಗುತ್ತದೆ. ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೂ ಅವರೂ ಮಾತನಾಡಬಹುದು. ಆದರೆ ಇವೊತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ನಾಯಕರು ಏನು ಹೇಳಿದ್ದಾರೆ, ಅದನ್ನು ನಾನು ಪ್ರಿವಿಲೇಜ್ ಕಮಿಟಿಗೆ ವಹಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಡಿ.ವೈ.ಎಸ್.ಪಿ. ಯನ್ನು ಸಸ್ಪೆಂಡ್ ಮಾಡುವುದು ಅಥವಾ ಆತನನ್ನು ವರ್ಗ ಮಾಡುವುದು ಆಗಬೇಕು. ಏಕೆಂದರೆ ಈ ರೀತಿ ಮಾಡಿರುವುದಕ್ಕೆ ಆತನ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳೇ, ಇದನ್ನು ತಾವು ಹಕ್ಕುಚ್ಯುತಿಗೆ ಕಳುಹಿಸಿ ಮತ್ತೆ ತಕರಾರು ಮಾಡುವಂಥದ್ದು ಏನೂ ಇದರಲ್ಲಿ ಇಲ್ಲ. ಇಲ್ಲಿ ಕಣ್ಣಿಗೆ ಕಂಡಂತೆ ನೇರವಾಗಿದೆ. ತಾವು ಈ ಬಗ್ಗೆ ಸದನದಲ್ಲಿಯೇ ತೀರ್ಮಾನವನ್ನು ತೆಗೆದುಕೊಳ್ಳಬಹುದು. ತಾವು ಒಪ್ಪಿರುವ ಪ್ರಕಾರ ಅಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್, ಈ ಬಂಧನ ಆಗಿದ್ದು ಸರಿಯಲ್ಲವೆಂದು ಹೇಳಿದ್ದಾರೆ. ಇನ್ನು ತಮ್ಮ ಸರ್ಕಾರದ ನಿಲುವೂ ಕೂಡ ಏನಿದೆಯೆಂದು ಯಾವುದೇ ಒಬ್ಬ ಅಧಿಕಾರಿ ಸಾರ್ವಜನಿಕ ಜೀವನದಲ್ಲಿರುವವರ ಮೇಲಾಗಲಿ, ಮಂತ್ರಿಗಳ ಮೇಲಾಗಲಿ, ಶಾಸಕರ ಮೇಲಾಗಲಿ, ಏನಾದರೂ ಅವರು ಮೊಕದ್ದಮೆ ಹೂಡಬೇಕಾದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕು. ಅನುಮತಿಯನ್ನೇ ಪಡೆಯದೆ ಒಂದು ನೋಟೀಸನ್ನು ಜಾರಿ ಮಾಡಿದ್ದಾರೆ. ಇದರಿಂದ ಮೇಲ್ನೋಟಕ್ಕೆ ಇದು ಎದ್ದು ನೇರವಾಗಿ ಕಾಣುತ್ತಿದೆ. ಆದುದರಿಂದ ಆ ಅಧಿಕಾರಿಯನ್ನು ತಾವು ಅಮಾನತ್ತಿನಲ್ಲಿಡಬೇಕು ಎಂದು ಕಳಕಳಿಯಿಂದ ಹೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳು ನನ್ನ ಕಡೆ ಇವೆ. ಇವೊತ್ತೇನು ಪ್ರಸ್ತಾಪ ಮಾಡಿದ್ದಾರೆ ಆ ಬಗ್ಗೆ ನೇರವಾಗಿ ನಾನು ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಹೇಳುತ್ತೇನೆ. ವಸ್ತುಸ್ಥಿತಿ ಏನಾಗಿದೆ ಎಂಬುದನ್ನು ತಿಳಿದುಕೊಂಡು ನಾನು ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ಒಂದು ವಿಚಾರ. ಇವೊತ್ತು ಇಷ್ಟೆಲ್ಲಾ ಸದಸ್ಯರುಗಳು ಹೇಳಿದ ಮೇಲೆ ಹಕ್ಕುಚ್ಯುತಿಯಾಗಿದೆಯೆಂದು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ. ಅಲ್ಲೂ ಕೂಡ ಶಾಸಕರುಗಳು ಸದಸ್ಯರಾಗಿರುತ್ತಾರೆ, ಅವರುಗಳೂ ಕೂಡ ಈ ಬಗ್ಗೆ ಹೇಳುತ್ತಾರೆ. ಆಗ ಅಲ್ಲೂ ಕೂಡ ಸಮಗ್ರವಾದ ನಿರ್ಣಯವನ್ನು ಈ ಬಗ್ಗೆ ತೆಗೆದುಕೊಳ್ಳಬಹುದು.

ಶ್ರೀ ಅರಗ ಜ್ಞಾನೇಂದ್ರ : ನಾಳೆಯಿಂದ ಅಲ್ಲಿ ಜನಪ್ರತಿನಿಧಿಗಳು ಕೆಲಸ ಮಾಡುವುದಾದರೂ ಹೇಗೆ ಹೇಳಿ. ಅದೇ ಡಿ.ವೈ.ಎಸ್.ಪಿ. ಜೊತೆ ಕೆಲಸ ಮಾಡುವುದಾದರೂ ಹೇಗೆ ಹೇಳಿ. ಇದರ ಬಗ್ಗೆ ತಾವು ಹೇಳಬೇಕು.

ಅಧ್ಯಕ್ಷರು : ಈಗ ಹಲವಾರು ಮಾನ್ಯ ಸದಸ್ಯರುಗಳು ಇದರಲ್ಲಿ ಹಕ್ಕುಚ್ಯುತಿಯಾಗಿದೆ. ಆದ್ದರಿಂದ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿದ್ದಾರೆ. ಈ ಸದನ ಕೂಡ ಒಪ್ಪಿದೆ ಎಂದು ಭಾವಿಸಿ ಹಕ್ಕುಚ್ಯುತಿಯಾಗಿದೆ ಎಂದು ಏನು ಹೇಳಲಾಗಿದೆ ಅದನ್ನು ಪರಿಶೀಲನೆ ಮಾಡಲು ಪ್ರಿವಿಲೇಜ್ ಕಮಿಟಿಗೆ ನಾನು ರೆಫರ್ ಮಾಡುತ್ತೇನೆ. ಈಗ ಮಾನ್ಯ ಶಿವಾನಂದ ನಾಯಕರ್‌ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯದ ಬಗ್ಗೆ ನನಗೆ ಹೇಳಿದ್ದರು. ಈಗ ಮಾನ್ಯ ಶಿವಾನಂದ ನಾಯಕ್‌ರವರು ಅದನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತಾ ತುಂಬಾ ನೋವಿನಿಂದ ಈ ಸಂಗತಿಯನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹಿಂದಿನ ವಿಷಯಕ್ಕೆ ಸಂಬಂಧಪಟ್ಟಂತೆ ಒಂದ್ನಿಮಿಷ ಮಾತನಾಡುತ್ತೇನೆ. ಇದು ನನ್ನ ಮನವಿ. ಏಕೆಂದರೆ ನಾನು ಇಷ್ಟು ಹೊತ್ತಿನವರೆಗೂ ಮಾತನಾಡಲಿಲ್ಲ. ಮುಖ್ಯಮಂತ್ರಿಗಳು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಲು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ಸರಿ. ಆದರೆ ಒಬ್ಬ ಅಧಿಕಾರಿ ನನ್ನನ್ನು ಕರೆದುಕೊಂಡು ಹೋಗಿ ಒಂದು ಗಂಟೆಗಳ ಕಾಲ ಸೆಲ್‌ನಲ್ಲಿ ಇಟ್ಟಿದ್ದಾರೆ ಎಂದ ಮೇಲೆ ಅವರನ್ನು ಅಮಾನತ್ತಿನಲ್ಲಿಡದಿದ್ದರೆ ನಾನು ಹೇಗೆ ನನ್ನ ಕ್ಷೇತ್ರದಲ್ಲಿ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ ಹೇಳಿ. ನನ್ನ ಪದ್ಧತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಜೀವರಾಜ್‌ರವರೆ, ಹಕ್ಕುಚ್ಯುತಿಯಾಗಿದೆಯಾದ ಕಾರಣ ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕೆಂದು ನಿಮ್ಮ ನಾಯಕರು ನೋಟಿಸ್‌ನ್ನು ಕೊಟ್ಟಿದ್ದಾರೆ.

(ಮಾನ್ಯ ಸದಸ್ಯರುಗಳನೇಕರು ಡಿವೈಎಸ್‌ಪಿ ಯನ್ನು ಸಸ್ಪೆಂಡ್ ಮಾಡಬೇಕೆನ್ನುತ್ತಿದ್ದರು)

ಅಧ್ಯಕ್ಷರು : ಈಗ ಆ ವಿಷಯದ ಚರ್ಚೆ ಮುಗಿದಿದೆ. ನನಗೆ ನೋಟಿಸ್ ಬಂದದ್ದು ಹಕ್ಕುಚ್ಯುತಿಯಾಗಿರುವುದರಿಂದ ಅದನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡಬೇಕು ಎಂದು ವಿನಂತಿ ಮಾಡಿದ್ದು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಸರ್ಕಾರದ ಕಡೆಯಿಂದ ನಮ್ಮದೇನೂ ಅಡ್ಡಿಯಿಲ್ಲ. ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬಹುದು ಎಂದು ಹೇಳಿದರು. ಸಾಮಾನ್ಯವಾಗಿ ಅಂಥ ಸಂದರ್ಭಗಳಲ್ಲಿ ಅವಕಾಶ ಇಲ್ಲದೇ ಇದ್ದರೂ ಕೂಡ ಈ ಸದನದ ಒಪ್ಪಿಗೆ ಇದೆ ಎಂದು ಭಾವಿಸಿ ನಾನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದೇನೆ. ಅದು ಈಗ ಚರ್ಚೆ ಮುಗಿದಿದೆ. ಮುಂದಿನ ಕಾರ್ಯಕಲಾಪಕ್ಕೆ ಹೋಗೋಣ.

ಶ್ರೀ ಅರಗ ಜ್ಞಾನೇಂದ್ರ : ಅ ಅಧಿಕಾರಿಯನ್ನು ಸಸ್ಪೆಂಡ್ ಮಾಡದಿದ್ದರೆ ಅಲ್ಲಿಯ ಶಾಸಕರು ಕೆಲಸ ಮಾಡುವುದಾದರೂ ಹೇಗೆ ಹೇಳಿ.

ಅಧ್ಯಕ್ಷರು : ಅದು ಬೇರೆ ವಿಚಾರ ಆ ಬಗ್ಗೆ ವಿಚಾರಣೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗ ಮುಂದಕ್ಕೆ ಹೋಗೋಣ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಸಭಾ ನಾಯಕರು ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾಳೆ ನಾವು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾಳೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಯಾರೂ ಕೆಲಸ ಮಾಡಲು ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ.

ಅಧ್ಯಕ್ಷರು: ದಯಮಾಡಿ ತಾವು ಕುಳಿತುಕೊಳ್ಳಿ. ಶಿವಾನಂದ ನಾಯಕರೆ, ನೀವು ವಿಷಯ ಪ್ರಸ್ತಾಪ ಮಾಡುತ್ತೀರೋ ಇಲ್ಲವೋ? ಬೇರೆ ಸಧಸ್ಯರುಗಳು ಎದ್ದುನಿಂತುಕೊಂಡಿದ್ದಾರೆ ಎಂದು ನೀವು ಕುಳಿತುಕೊಂಡರೆ ಹೇಗೆ? ಈಗಾಗಲೇ ಹಿಂದಿನ ವಿಷಯದ ಚರ್ಚೆ ಮುಗಿಸಿ ನಾನು ಮುಂದಿನ ಕಾರ್ಯಕಲಾಪಕ್ಕೆ ಹೋಗಿದ್ದೇನೆ. ನೀವು ಬೆಳಿಗ್ಗೆ ನನ್ನ ಛೇಂಬರ್‌ಗೆ ಬಂದು ಗಲಾಟೆ ಮಾಡಿ ಶೂನ್ಯ ವೇಳೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು ಎಂದು ಕೇಳಿದಿರಿ. ಆ ಪ್ರಕಾರ ನಾನು ಈಗ ಅವಕಾಸ ಮಾಡಿಕೊಟ್ಟಿದ್ದೇನೆ. ಈಗ ಪ್ರಸ್ತಾಪ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಮ್ಮ ಹತ್ತಿರ ಈಗ ಸಂದರ್ಭ ಸರಿ ಇಲ್ಲದಿರುವುದರಿಂದ ಬೇರೆ ಬೇರೆ

ಕಾರಣಕ್ಕಾಗಿ ನಾನು ಹೆಚ್ಚು ಮಾತನಾಡುತ್ತಿಲ್ಲ. ನೀವು ಹೀಗೆ ಮಾಡಿ. ಅಲ್ಲಿ ಎಸ್.ಪಿ, ಡಿ.ಸಿ, ಆ ದತ್ತಜಯಂತಿ ಹಿನ್ನಲೆ, ಈ ಎಲ್ಲಾ ಕಾರಣಕ್ಕೆ ಸಾಕಷ್ಟು ಸಂಬಂಧಗಳು ಕುಲಗೆಟ್ಟು ಹೋಗಿದೆ. ಅವರದೇ ಆದ ರೀತಿ, ನಮ್ಮದೇ ಆದ ರೀತಿ ಬೇರೆ. ಅದು ಅವರು ಕಾನೂನಿನಂತೆ ಏನಾದರೂ ಮಾಡಿಕೊಳ್ಳಲಿ. ತಾವು ಹೋಂ ಕಮಿಶನರ್‌ರಿಂದ ಇದರ ಬಗ್ಗೆ ತನಿಖೆ ಮಾಡಿಸಿ. ಆಗ ಕಡೇಪಕ್ಷ ವಾಸ್ತವಿಕ ಸತ್ಯಸಂಗತಿ ನಿಮ್ಮ ಗಮನಕ್ಕೆ ಬರುತ್ತದೆ. ಪ್ರಿವಿಲೇಜ್ ಕಮಿಟಿಯವರು ಏನು ಸಭೆ ಸೇರಿ ಕರೆಯಬೇಕೋ ಅದು ಡಿಲೇ ಆಗುತ್ತದೆ. ಆದುದರಿಂದ ಈ ತನಿಖೆಯನ್ನು ಮೊದಲು ಯಾರಾದರೂ ಹೋಂ ಸೆಕ್ರಟರಿ, ಹೋಂ ಕಮಿಶನರ್, ಇವರ್‍ಯಾರಿಂದಲಾದರೂ ಮಾಡಿಸಿ. ಇದನ್ನಾದರೂ ದಯವಿಟ್ಟು ತಾವು ಮಾಡಿಸಿ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಶಾಸಕರ ಬಂಧನ ಮಾಡಿದರು ಎನ್ನುವ ವಿಷಯವಾಗಿದೆ. ನಾನು ಮಾನ್ಯ ಜೀವರಾಜ್‌ರವರ ಬಗ್ಗೆ ತಿಳಿದುಕೊಂಡಿದ್ದೇನೆ. ಅವರ ಜೊತೆಯಲ್ಲಿಯೇ ಅವರ ಮತಕ್ಷೇತ್ರಕ್ಕೆ ನಾನು ಹೋಗಿದ್ದೇನೆ; ನೋಡಿದ್ದೇನೆ. ಇದನ್ನು ನಮ್ಮ ಹೋಂ ಕಮಿಶನರ್‌ರವರಿಂದ ತನಿಖೆ ಕೂಡ ಮಾಡಿಸಿ ಏನಿದೆ ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಓ.ಕೆ. ಸಾರ್.

ಅಧ್ಯಕ್ಷರು : ಈಗ ಶಿವಾನಂದ ನಾಯ್ಕರವರು ಮಾತನಾಡಬೇಕು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: (ಅ) ಭಟ್ಕಳದಲ್ಲಿ ತಿಮ್ಮಪ್ಪನಾಯ್ಕರ ಕೊಲೆಗೆ ಸಂಬಂಧಪಟ್ಟಂತೆ ಕೊಲೆಗಾರರನ್ನು ಪತ್ತೆ ಹಚ್ಚಿಲ್ಲದಿರುವ ಬಗ್ಗೆ

ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ತುಂಬಾ ನೋವಿನಿಂದ ಈ ಸಂಗತಿಯನ್ನು ಹೇಳುತ್ತಿದ್ದೇನೆ. ಕಳೆದ ಅಧಿವೇಶನದಲ್ಲೂ ಕೂಡ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಭಟ್ಕಳದಲ್ಲಿ 19 ಕೊಲೆಗಳಾಗಿವೆ. ಇದು 20ನೇ ಕೊಲೆ ಕಳೆದ ಎಂಟು ತಿಂಗಳ ಹಿಂದೆ ನಡೆದಿರುವುದು. ಅದು ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್. 17ರಲ್ಲಿ ರಾತ್ರಿ 10.30ಕ್ಕೆ ನಡೆದಿರುವುದು. ಆಗ ಅಲ್ಲಿ ತಿಮ್ಮಪ್ಪನಾಯ್ಕರ ಹತ್ಯೆಯಾಗಿದೆ. ಅವರನ್ನು ಗುಂಡಿಟ್ಟು ಕೊಲೆ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹಿಂದೆ ಈ ಮನೆಯ ಸದಸ್ಯರಾಗಿದ್ದ ಡಾ: ಚಿತ್ತರಂಜನ್‌ರವನ್ನೂ ಕೂಡ ಹತ್ಯೆ ಮಾಡಲಾಗಿತ್ತು. ಭಟ್ಕಳದಲ್ಲಿ ಈಗಾಗಲೇ 20 ಕೊಲೆಗಳಾಗಿದ್ದರೂ ಕೂಡ ಒಬ್ಬ ಕೊಲೆಗಾರರನ್ನೂ ಕೂಡ ಈವರೆಗೆ ಪತ್ತೆಹಚ್ಚಲಿಲ್ಲ ಮತ್ತು ಒಬ್ಬರ ಮೇಲೂ ಕೇಸ್ ಬುಕ್ ಮಾಡಲಿಲ್ಲ ಮತ್ತು ಯಾರನ್ನೂ ಸಹ ಆರೆಸ್ಟ್ ಮಾಡಲಿಲ್ಲ. ಭಟ್ಕಳದಲ್ಲಿ ಜೀವನ ಮಾಡುವಂಥ ಜನರು ಒಂದು ರೀತಿಯಲ್ಲಿ ಭಯಭೀತರಾಗಿ ನಾಳೆ ಏನು ಆಗುತ್ತದೋ ಎಂದು ಭಯಭೀತರಾಗಿ ತಮ್ಮ ಜೀವ ರಕ್ಷಣೆಯನ್ನು ಯಾರು ಮಾಡುತ್ತಾರೆ ಎನ್ನುವ ಪ್ರಶ್ನೆ ಅವರಲ್ಲಿ ಮೂಡಿದೆ. ಆದುದರಿಂದ ತುಂಬಾ ನೋವಿನಿಂದ ಈ ಸಂಗತಿಯನ್ನು